Disposal of Applications for Village Extension in Nelamangala Taluk.

*Q.—192 Sri M. HANUMANTHAIAH (Nelamangala).—

Will the Government be pleased to state :—

(a) the number of applications received from the people of Depressed Classes and the ryots of Nelamangala Taluk for village extension during the years 1956-57 and 1957-58;

(b) out of them, the number of applications disposed of;

(c) the number of pending applications (talukwise and village-wise information may be furnished):

(d) the number of cases in which compensation has not yet been paid despite completion of land acquisition proceedings and sanction of amount of compensation ?

A.—Sri T. SUBRAMANYA (Minister for Law, Ladour and Local Self-Government).—

(a) 1956-57	6.	1957-58	2.
(b) 1956-57	2.	1957-58	1.
(c) 1956-57	4	1957-53	1.

Village	*Village*
1. Kenganahalli	1. Srinivasapura
2. Muddulingahalli	
3. Lakkasandra	
4. Heggunda.	

(d) Two.

Appointment of the Principal to the Service Institute, V. C. Farm. Mandya.

*Q.— 197. Sri S. KARIAPPA (Virupakshipur).—

Will the Government be pleased to state :—

(a) whether the Principal to the Service Institute, V. C. Farm, Mandya, has been appointed recently ;

(b) if so, authority that made the appointment ?

A.—Sri H. C. LINGA REDDY (Deputy Minister for Planning and Development . —

(a) There is no Institute by name Service Institute at V. C. Farm, Mandya. There is an Extension Training Centre at V. C. Farm, Mandya, and the Principal of which has been appointed recently.

(b) Government of Mysore.

NON-OFFICIAL RESOLUTIONS.

Re. Declaration of certain areas as Famine Areas.

(Debate continued)

Mr. SPEAKER.—On the non-official resolution moved by the Hon'ble Member Sri Kenchappa, in all six members have spoken already. They are: Sri Kenchappa, Sri B. Narayanaswamy, Sri K. L. Narasimhiah, Sri S. Y. Patil, Sri Revannasiddappa and Sri Tare Gowda. I think that there has been sufficient discussion on this resolution. I would therefore request the Hon'ble Minister to reply to the debate.

†ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಸ್ವಾಮಿ ಈ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈ ನಿರ್ಣಯದಮೇಲೆ ಹಿಂದೆ ಚರ್ಚೆನಡೆಯುತ್ತಿದ್ದಾಗ ಇದ್ದ ಪರಿಸ್ಥಿತಿಗೂ, ಈಗಿರತಕ್ಕ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ ಈಗ. ಈ ಮಧ್ಯೆ ಅನೇಕ ಬದಲಾವಣೆಗಳಾಗಿವೆ. ಆದರಿಂದ ನನಗೆ ಕೆಲವು ಮಾತುಗಳನ್ನಾಡಲು ಸ್ವಲ್ಪ ಅವಕಾಶಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

Mr. SPEAKER.—Under the rules, the Hon'ble Member is entitled to reply. I have seen the speeches of all the members and I find from them that there is nothing for the Hon'ble Member to reply because all of them have supported him. In spite of that, if the Hon'ble Member insists on replying, I have no objection to it but I will not allow him to bring in any new matter in his reply.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಈ ದಿವಸ ತಮ್ಮ ಕಾರ್ಯಕ್ರಮದಪಟ್ಟಿಯಲ್ಲಿರುವುದು—ಶ್ರೀ ಕೆ. ಕೆಂಚಪ್ಪನವರು ಸೂಚನೆಮಾಡಿರತಕ್ಕ ನಿರ್ಣಯದಮೇಲೆ ಚರ್ಚೆ ಮುಂದ ವರಿಸಲಾಗಿದೆ ಎಂದು. ಎಂದರೆ ಇಲ್ಲಿ ಆ ಚರ್ಚೆ ಕ್ಲೋಸ್ ಆಯಿತು ಎಂತಲೂ ಇಲ್ಲ; ರಿಪ್ಲೈ ಆಗಬೇಕೆಂತಲೂ ಇಲ್ಲ. ಆದರೆ ಈ ಸದನದ ಕಾಲವನ್ನು ಇದಕ್ಕಾಗಿ ಹೆಚ್ಚಿಗೆ ಉಪಯೋಗಿಸಬೇಕೆಂಬುದು ನನ್ನ ಉದ್ದೇಶವಲ್ಲ. ಶ್ರೀ ಬಿ. ಎಸ್. ಶಂಕರಪ್ಪನವರು ಆ ಜಿಲ್ಲೆಯವರು; ಆದರಿಂದ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟರೆ ಸಾಕು. ಐದು ನಿಮಿಷವಾದರೂ ತಾವು ಅವಕಾಶಮಾಡಿಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಕಾರ್ಯಕ್ರಮದಪಟ್ಟಿಯಲ್ಲಿ ಸಾಮಾನ್ಯ ಚರ್ಚೆ ಮುಂದುವರಿದರೂ 'further discussion' ಎಂತಲೇ ಹಾಕಲಾಗುತ್ತದೆ. ಮಂತ್ರಿಗಳು ಉತ್ತರ ಕೊಡಬೇಕೆಂದಿದ್ದಾಗಲೂ 'further discussion' ಎಂತಲೇ ಹಾಕಲಾಗುತ್ತದೆ. ನೀವು ಹೀಗೆಲ್ಲಾ ಪುನಃ ಚರ್ಚೆಮಾಡಲು ಹೊರಟರೆ—ಆ ಕಡೆಯುವರು ಯಾರಾದರೂ ಎದ್ದು Closure motion move ಮಾಡಿದರೆ ಆಗ ಇವೆಲ್ಲಾ ಮುಗಿದುಹೋಗುತ್ತದೆ. ಈವರೆಗೆ ಮಾತನಾಡಿರತಕ್ಕ ಆರು ಜನರೂ ಈ ನಿರ್ಣಯಕ್ಕೆ ಬೆಂಬಲ ನೀಡಿದಾರೆ. ಈಗಾಗಲೇ ತಾವೇನು ಈ ನಿರ್ಣಯದಮೇಲೆ ಮಾತನಾಡಿದ್ದಾರೋ ಅದಕ್ಕೆ ಈಗ ಹೊಸ ವಿಚಾರಗಳನ್ನು ಸೇರಿಸಿ ಮಾತನಾಡಲು ಅವಕಾಶವಿಲ್ಲ. ಆದುದರಿಂದ ಈಗ ಮಂತ್ರಿಗಳು ಉತ್ತರ ಹೇಳಬೇಕೆಂದು ಹೇಳುತ್ತೇನೆ.

Sri C. J. MUCKANNAPPA (Gubbi).—What Sri Puttaramiya says is correct. I therefore request you to allow five minutes to each member.

ಅಧ್ಯಕ್ಷರು.—ಸದಸ್ಯರು ಕಳುಹಿಸಿರತಕ್ಕ ನಿರ್ಣಯಗಳು ಅನೇಕ ಇವೆ. ಒಂದೊಂದು ನಿರ್ಣಯವನ್ನು ಮೂರು ದಿವಸಗಟ್ಟಲೆ ಚರ್ಚೆಮಾಡುವುದು ಅಷ್ಟು ಉಚಿತವಾದದ್ದಲ್ಲ. ಕಡೆಗೆ ತಾವುಗಳೆಲ್ಲರೂ ನಿರ್ಣಯಗಳೆಲ್ಲವೂ ಹಾಗೆಯೇ ಉಳಿದವು ಎಂದು ಅದನ್ನೂ ಹೇಳುತ್ತೀರಿ. ಬೇಗ ಚರ್ಚೆ ನಡೆಸಲಿಕ್ಕೂ ಅವಕಾಶ ಕೊಡುತ್ತಿಲ್ಲ. ಹೀಗೆಲ್ಲ ಮಾಡುತ್ತಿರುವುದು ಖಂಡಿತ ಸರಿಯಾದದ್ದಲ್ಲ. ಈ ಸಲವಾದರೂ ನಾವು ಹತ್ತಾರು ನಿರ್ಣಯಗಳನ್ನು ಚರ್ಚೆಮಾಡಿ ಮುಗಿಸೋಣ. ಈಸಲ ಅಷ್ಟು ಶ್ರೇಯಸ್ಸನ್ನಾದರೂ ತೆಗೆದುಕೊಳ್ಳೋಣ. ಶ್ರೀ ಕೆಂಚಪ್ಪನವರು ಈಗ ಜವಾಬು ಕೊಡತಕ್ಕ ಒಂದು ಅವಕಾಶವನ್ನು ಅವರು ಉಪಯೋಗಿಸಿಕೊಂಡು ಕೆಲವು ಮಾತುಗಳನ್ನು ಬೇಕಾದರೆ ಆಡಬಹುದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸರ್ಕಾರದವರು ಉತ್ತರಕೊಟ್ಟನಂತರ ನಿರ್ಣಯದ ಸೂಚಕರು ಉತ್ತರ ಕೊಡಬೇಕೆಂದಿದೆ.

ಅಧ್ಯಕ್ಷರು. ಸದಸ್ಯರು ಉತ್ತರ ಕೊಟ್ಟನಂತರ ಮಂತ್ರಿಗಳು ಉತ್ತರಕೊಡಬೇಕೆಂದಿದೆ. ಈ ವಿಚಾರದಲ್ಲಿ ಶ್ರೀ ಪುಟ್ಟರಾಮಯ್ಯನವರಿಗೆ ರೂಲ್ಸು ಗೊತ್ತಿಲ್ಲವೆಂದಾಯಿತು. ಅವರು ರೂಲ್ 294(3)ನ್ನು ದಯೆಯಿಟ್ಟು ನೋಡಬೇಕು. Rule 294(3) is quite clear on this point.

Sri B. K. PUTTARAMIAH.—It is not a motion, it is a resolution.

Mr. SPEAKER.—There is not much difference between a motion and a resolution. A resolution is a motion.

†ಶ್ರೀ ಕೆ. ಕೆಂಚಪ್ಪ.—ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ ಮತ್ತು ಹಿರಿಯೂರು ತಾಲ್ಲೂಕುಗಳು, ತುಮಕೂರು ಜಿಲ್ಲೆಯ ಸಿರಾ, ಮಧುಗಿರಿ ಕೊರಟಗೆರೆ ಮತ್ತು ಪಾವಗಡ ತಾಲ್ಲೂಕುಗಳು ಮತ್ತು ಬಿಜಾಪುರ ಜಿಲ್ಲೆಯ ಉತ್ತರದಲ್ಲಿರುವ ನಾಲು ತಾಲ್ಲೂಕುಗಳು ಮತ್ತು ತಿದ್ದುಪಡಿಪಡಿಯಲ್ಲಿ ಸೂಚಿಸಿರುವಂತೆ ಕೋಲಾರಜಿಲ್ಲೆಯ ಕೆಲವು ಭಾಗಗಳಲ್ಲಿ ಬರಗಾಲ ಪರಿಸ್ಥಿತಿ ಉದ್ಭವಿಸಿದ್ದು 1958ನೆಯ ಇಸವಿ ಸೆಪ್ಟೆಂಬರ್ ತಿಂಗಳಿನಲ್ಲಿ. ಏಕೆ ಆವಾಗ ಅಂಥ ಪರಿಸ್ಥಿತಿ ಬಂತು ಎಂದರೆ, ಅಲ್ಲಿಯವರೆಗೂ ಮಳೆ ಆಗಿರಲಿಲ್ಲ. ಮಳೆ ಆಗದೆ ಇದ್ದ ಪ್ರಯುಕ್ತ ಅಲ್ಲಿ ಬಹುಭಾಗ ಹಿಂಗಾರು ಬೆಳೆ ಆಗಬೇಕಾಗಿದ್ದು, ಮುಂಗಾರು ಬೆಳೆ ಮಾಗಿದು ಹೋಗಿದ್ದರೂ, ಹಿಂಗಾರು ಮಳೆ ಬಾರದೆ ಇದ್ದುದರಿಂದ ಸೆಪ್ಟೆಂಬರ್ ತಿಂಗಳಿನಲ್ಲಿ ಕಾಗದ ಬರೆದುದರಮೇಲೆ ಸರ್ಕಾರದವರು ಈ ವಿಚಾರದಲ್ಲಿ ಅಲ್ಲಿಂದ ಇಲ್ಲಿಯವರೆಗೂ ಪರಿಶೀಲಿಸುತ್ತಿದ್ದಾರೆ. ನಾನಾಗಲೇ ವಿಚಾರಗಳನ್ನು ಹೇಳಿರುವುದರಿಂದ ಅವುಗಳನ್ನುಳಿದು ಬಾಕಿ ವಿಚಾರಗಳನ್ನುಮಾತ್ರವೇ ಹೇಳಲು ಕೆಲವಾರು ವಿಷಯಗಳನ್ನು ತಿಳಿಸಬೇಕೆಂದಿದ್ದೇನೆ.

[MR. DEPUTY SPEAKER in the Chair]

ಅಲ್ಲಿಂದ ಇಲ್ಲಿಯವರೆಗೂ ಈ ಪ್ರದೇಶಗಳಲ್ಲಿ ಬರಗಾಲ ಪರಿಸ್ಥಿತಿ ಇದೆ ಎನ್ನುವ ವಿಚಾರ ಪ್ರತಿಯೊಬ್ಬರಿಗೂ ಗೊತ್ತಿದ್ದರೂ ಸಹಿತ, ಅಧಿಕಾರಿಗಳು ಅಲ್ಲಿ ಸಂಚಾರ ಮಾಡಿ, ಇಂಥ ತಾಲ್ಲೂಕುಗಳಲ್ಲಿ ಇಂಥ ಜಿಲ್ಲೆಗಳಲ್ಲಿ ಬರಗಾಲ ಪರಿಸ್ಥಿತಿ ಇದೆ ಎಂದು ಪ್ರತಿಯೊಬ್ಬರೂ ಅಭಿಪ್ರಾಯವನ್ನು ಕೊಟ್ಟು ಸಹಿತ ಆ ಪ್ರದೇಶಗಳಲ್ಲಿ ಯಾವ ಪ್ರಮಾಣದಲ್ಲಿ ಬರಗಾಲವಿದೆಯೋ, ಜನರು ಎಷ್ಟರಮಟ್ಟಿಗೆ ನೊಂದುಕೊಂಡಿದ್ದಾರೆಯೋ ಅಷ್ಟಕ್ಕೆ ಸರಿಯಾದ ಅಥವಾ ಸಮಾಧಾನವಾಗುವಂಥ ರೀತಿಯಲ್ಲಿ ಕೆಲಸಗಳು ನಡೆಯಲು ಏರ್ಪಾಡುಮಾಡಿಲ್ಲವಾದ್ದರಿಂದ ದುಃಖವಾಗುತ್ತದೆ ಎಂದು ಹೇಳುತ್ತೇನೆ. ಮಂತ್ರಿಗಳು ಸಂಚಾರಮಾಡಿರಬಹುದು, ಬೇಕಾದಷ್ಟು ಅಧಿಕಾರಿಗಳೂ ಅಲ್ಲಿಗೆ ಹೋಗಿ ಸಂಚಾರಮಾಡಿ, ಬರಗಾಲವಿದೆ ಎಂದು ಹೇಳಿರಬಹುದು. ಇದುವರೆಗೂ ಅಲ್ಲಿ ಬೆಳೆ ಆಗಿಲ್ಲವೆಂದು ಗೊತ್ತಿದ್ದರೂ, ಕೆರೆಗಳಲ್ಲಿ, ಕಾಲುವೆಗಳಲ್ಲಿ ನೀರಿಲ್ಲವೆಂದು ಗೊತ್ತಿದ್ದರೂ ಸಹಿತ ಅಲ್ಲಿ ಜಮೀನು ಕಂದಾಯದ ರಿಮಿಷನ್ ಸಹಿತ ಆಗಿಲ್ಲ. ಕೆರೆಗಳಲ್ಲಿ ನೀರಿಲ್ಲದೆ ಇರುವುದರಿಂದ ತರೀ ವ್ಯವಸಾಯ ನಡೆದೇ ಇಲ್ಲ. ಇಂಥ ಸಂದರ್ಭಗಳಲ್ಲಿ ತರೀ ಜಮೀನಿನ ಕಂದಾಯವನ್ನು ಮಾಫಿ ಮಾಡಬೇಕೆಂದು ಕಾನೂನಿನಲ್ಲಿ ಉಲ್ಲೇಖಿತವಾಗಿದ್ದರೂ ಸಹಿತ, ನೀರಿಲ್ಲದೆ ಹೋದರೆ ನೀರು ಕಂದಾಯವನ್ನು ವಸೂಲ್ಮಾಡಬಾರದೆಂದಿದ್ದರೂ ಸಹಿತ ಕಂದಾಯವನ್ನು ವಸೂಲ್ಮಾಡತಕ್ಕ ಅಭಿಪ್ರಾಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಈ ವಿಚಾರವಾಗಿ ನಾನು ಎಷ್ಟೋ ಅಧಿಕಾರಿಗಳಲ್ಲಿ ಕೇಳಿಕೊಂಡಿದ್ದೇನೆ, ಆದರೂ ಸಹಿತ ಆ ಸ್ಥಳಗಳಲ್ಲಿ ಪರಿಹಾರ ದೊರಕುವಂಥ, ಉಪಯೋಗವಾಗುವಂಥ ಕೆಲಸವನ್ನು ಒಂದನ್ನೂ ಮಾಡಿಲ್ಲ. ಮುಖ್ಯವಾಗಿ ಎರಡುಕೋಟಿ ರೂಪಾಯಿ ಸಣ್ಣ ನೀರಾವರಿ ಯೋಜನೆಗಳಿಗೋಸ್ಕರ ಮೀಸಲಾಗಿದೆ ಎಂದು ಹೇಳಿದ್ದರೂ ಸಹಿತ ಅದರಲ್ಲಿ ಬಹುಭಾಗ, ಬಹಳ ಹೆಚ್ಚಿನ ಪ್ರಮಾಣದಲ್ಲಿ ಕೆರೆಗಳಿಗೋಸ್ಕರ ಇರುವ ಹಣದಲ್ಲಿ ಖರ್ಚಾಗದೆ ಇದ್ದರೂ ಸಹಿತ, ಬರಗಾಲ ಪರಿಸ್ಥಿತಿ ಇದ್ದರೂ ಸಹಿತ, ಸಣ್ಣ ಕೆರೆಗಳು ಬೇಕಾದಷ್ಟಿದ್ದರೂ ಸಹಿತ, ಕೆರೆಗಳ ಕೆಲಸವನ್ನು ಮಾಡುವುದರಮೂಲಕ ಜನಗಳಿಗೆ ಉಪಕಾರ ಮಾಡದೇ ಆ ಹಣವನ್ನು ಉಳಿಸಿಕೊಂಡು ಬಂದರು. ಏತಕ್ಕೆ ಹೀಗೆಲ್ಲ ಮಾಡಿದರೆಂಬುದು ಗೊತ್ತಾಗುವುದಿಲ್ಲ. ಕೆರೆಗಳನ್ನು ರಿಪೇರಿಮಾಡದೆ, ಕೆರೆಗಳನ್ನು ಉತ್ತಮಪಡಿಸಿ ಅವುಗಳ ಕೆಪಾಸಿಟಿಯನ್ನು ಹೆಚ್ಚುಮಾಡದೆ ಇರುವುದು ಬಹಳ ದುಃಖದ ಸಂಗತಿ. ಬರಗಾಲಕ್ಕೋಸ್ಕರ ಮೀಸಲಾಗಿಟ್ಟ ಅಂಥ ದುಡ್ಡನ್ನು ಖರ್ಚುಮಾಡಿ, ಸಣ್ಣ ನೀರಾವರಿ ಯೋಜನೆಗಾಗಿ ಇರುವ ದುಡ್ಡನ್ನು ಹೆಚ್ಚಿಗೆ ಪ್ರಮಾಣದಲ್ಲಿ

ಖರ್ಚುಮಾಡಿ ಆ ಮೂಲಕ ಪ್ರಜೆಗಳಿಗೆ ಕೂಲಿ ಸಿಕ್ಕು ವಂತಾಗಿ ಅವರ ಹೊಟ್ಟೆಪಾಡಿಗೆ ಅನುಕೂಲವಾಗಿದ್ದರೆ ಎಷ್ಟೋ ಸಂತೋಷ ಪಡಬಹುದಾಗಿತ್ತು. ಈ ಕೆಲಸ ಕಾರ್ಯಗಳು ಎಳ್ಳಷ್ಟೂ ನಡೆಯದೆ ಇರುವುದರಿಂದ ಆ ಭಾಗದ ಜನರಿಗೆ ಬಹಳ ತೊಂದರೆಯಾಗಿದೆ. ಯಾವಾಗ ನೋಡಿದರೂ ರಸ್ತೆಮಾಡುತ್ತೇವೆ, ಅದಕ್ಕೋಸ್ಕರ ದುಡ್ಡುಬೇಕು ಎಂದು ಹೇಳುತ್ತೀರಿ. ಯಾವುದೋ ಒಂದು ಕಾಲದಲ್ಲಿ ಆರೆಂಟುತಿಂಗಳಕೆಳಗೆ ಅದಂಥ ರಸ್ತೆಯನ್ನು ಮಾಡುತ್ತೇವೆ ಎಂದು ಹೇಳಿ, ಅದಕ್ಕೆ ಇಷ್ಟು ದುಡ್ಡು ಖರ್ಚುಮಾಡಿದ್ದೇವೆ ಎಂದು ಹೇಳಿ, ಅದೇ ರಸ್ತೆಯನ್ನೇ ಮತ್ತೊಂದು ಸಲ ಮಾಡಿದ್ದೇವೆಂದು ಬರೆದುಕೊಳ್ಳುತ್ತಾರೆ. ಈ ರೀತಿ ಒಂದುಸಲ ಮಾಡಿರುವ ರಸ್ತೆಗಳನ್ನೇ ಮತ್ತೊಂದು ಸಲ ಮಾಡಿದ್ದೇವೆಂದರೆ ಅದರಿಂದ ಹಣ ಖರ್ಚಾಗುವುದಿಲ್ಲವೇ! ಈರೀತಿಯಲ್ಲಿ ಎಷ್ಟೋ ಕೆಲಸಗಳು ನಡೆಯುತ್ತಿವೆ. ಈ ದೃಷ್ಟಿಯಿಂದ ನೋಡಿದರೆ, ಬರಗಾಲದಲ್ಲಿ ಯಾವ ಯಾವ ಕೆಲಸಗಳನ್ನು ಮಾಡಬೇಕಾಗಿತ್ತೋ ಆ ಕೆಲಸಗಳನ್ನು ಯಾವ ಪ್ರಮಾಣದಲ್ಲಿ ಮಾಡಬೇಕಾಗಿತ್ತೋ ಆ ಪ್ರಮಾಣದಲ್ಲಿ ಮಾಡಲಿಲ್ಲವಲ್ಲವೆಂದು ದುಃಖವಾಗುತ್ತದೆ. ಇಂಥ ಪರಿಸ್ಥಿತಿ ಹಿಂದೆ ಬಂದಿದ್ದರೆ ಬೇಜವಾಬ್ದಾರಿ ಸರ್ಕಾರದವರು ಎಷ್ಟು ಕೆಲಸವನ್ನು ಮಾಡುತ್ತಿದ್ದರು ಎನ್ನುವುದನ್ನು ಅನುಭವದಿಂದ ಹೇಳುತ್ತಿದ್ದೇನೆ. 194[illegible]ನೇ ಇಸವಿಯಲ್ಲಿ ನಮ್ಮ ಜಿಲ್ಲೆಯಲ್ಲಿ ದೊಡ್ಡ ಬರಗಾಲ ಬಂತು. ಆವಾಗ ಅವರು ಮಾಡಿದಂಥ ಕೆಲಸಕ್ಕೂ ಈಗ ತಮ್ಮ ಕಾಲದಲ್ಲಿ ಮಾಡುತ್ತ ಇರುವುದಕ್ಕೂ ಸಂಬಂಧವಿಲ್ಲ. ಬೇಜವಾಬ್ದಾರಿ ಸರ್ಕಾರವಿದ್ದಾಗ ಬರಗಾಲ ಬಂದರೆ ಯಾರೂ ನೋಡುವವರಿಲ್ಲ ಕೇಳುವವರಿಲ್ಲವೆಂದು ಎಷ್ಟೋ ಭಾಷಣಗಳನ್ನು ಮಾಡುತ್ತಿದ್ದಿರಿ. ಈಗ ಸರ್ಕಾರವನ್ನು ನಡೆಸತಕ್ಕವರು ನಮ್ಮ ಜನರೇ. ನಮ್ಮ ಕಪ್ಪು ಬಣ್ಣದ ಜನಗಳೇ ಈಗ ರಾಜ್ಯಭಾರ ಮಾಡುತ್ತಿರುವುದೂ ನಿಜ. ಆದರೆ 1945-46ರಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡಿದ್ದಾರೆಯೋ, ಯಾವ ಪ್ರಮಾಣದಲ್ಲಿ ಕೆಲಸ ಮಾಡಿದ್ದಾರೆಯೋ ಆ ಪ್ರಮಾಣದಲ್ಲಿ ಇವರು ಕೆಲಸಮಾಡಿದ್ದಾರೆಯೇ ಎನ್ನುವ ಪ್ರಶ್ನೆಯನ್ನು ಕೇಳುತ್ತೇನೆ. ಅದರಲ್ಲಿ ಯಾವ ಭಾಗವೂ ಹೊರಿದೂಗಲಾರದು. ಈ ವಿಚಾರದಲ್ಲಿ ಹೆಚ್ಚಿಗೆ ಮಾತನಾಡಲು ಇಷ್ಟವಿಲ್ಲ. ಆದರೆ ಏತಕ್ಕೆ ದೊಡ್ಡದೊಡ್ಡ ಸಹಿತ ನೀರಾವರಿ ಕಾರ್ಯಗಳನ್ನು ಮಾಡದಿರುವುದಕ್ಕೆ ಕಾರಣವೇನು, ರಸ್ತೆಗಳ ವಿಚಾರದಲ್ಲಿ ಇಷ್ಟು ಉಪೇಕ್ಷೆಮಾಡುವುದಕ್ಕೆ ಕಾರಣವೇನು, ರಸ್ತೆಗಳನ್ನು ಮಾಡಿರುವ ಕಡೆಗಳಲ್ಲಿ ಕಾಸ್‌ವೇ, ಕಲ್ವರ್ಟ್ ಇವುಗಳನ್ನೆಲ್ಲ ಕಟ್ಟಿದರೆ ರಸ್ತೆಗಳು ಹೆಚ್ಚು ಉಪಯೋಗಕ್ಕೆ ಬರುವುದರಿಂದ ಅದನ್ನು ಮಾಡದೆ ಇರುವುದಕ್ಕೆ ಕಾರಣವೇನು, ಸಾಕಾದಷ್ಟು ಕಾಳನ್ನು ಸಂಗ್ರಹಮಾಡಿ ಜನಗಳಿಗೆ ಕೊಡದೆ ಇರುವುದಕ್ಕೆ ಕಾರಣವೇನು, ಈ ಎಲ್ಲ ಪ್ರಶ್ನೆಗಳೂ ಉದ್ಭವಿಸುತ್ತವೆ. ಮುಖ್ಯವಾಗಿ ಒಂದು ವಿಚಾರ ಹೇಳುತ್ತೇನೆ. ಯಾವ ಕಡೆ ಹೆಚ್ಚು ಬರಗಾಲವಿದೆಯೋ ಅಲ್ಲಿ ವಿದ್ಯುಚ್ಛಕ್ತಿಯನ್ನು ಕೊಡದೆ ಹೋದರೆ ಬರಗಾಲ ತಪ್ಪುವುದೇ ಇಲ್ಲ. ಈ ಸ್ಥಳಗಳಲ್ಲಿ ಯಾವಾಗಲೂ ಆರರಿಂದ ಎಂಟು ಅಂಗುಲ ಮಳೆ ಬರತಕ್ಕದ್ದು ಸರ್ವ ಸಾಧಾರಣ. ಹಿರಿಯೂರು ತಾಲ್ಲೂಕಿನಲ್ಲಿ 12 ಅಂಗುಲ ಮಳೆ ಬರುತ್ತದೆ ಎಂದು ದಾಖಲೆಗಳಿರಬಹುದು. ಹಿರಿಯೂರಿನಿಂದ ಪಶ್ಚಿಮದ ಭಾಗದಲ್ಲಿ ಆರೀತಿ ಇರಬಹುದು. ಆದರೆ ಅದೇ ಹಿರಿಯೂರು ತಾಲೂಕಿನಲ್ಲಿ ಪೂರ್ವದಿಕ್ಕಿನಲ್ಲಿರುವ ಧರ್ಮಪುರಿ ಹೋಬಳಿ ಮತ್ತು ಜವನಗೊಂಡನಹಳ್ಳಿ ಹೋಬಳಿಗಳಲ್ಲಿ ಬರಗಾಲ ಬಂದರೆ ಕೇಳುವವರೇ ಇಲ್ಲ. ಅಲ್ಲಿ ರಸ್ತೆಗಳಿಲ್ಲ. ಅಧಿಕಾರಿಗಳು ಅಲ್ಲಿಗೆ ಹೋಗುವಹಾಗೆಯೇ ಇಲ್ಲ, ಅಲ್ಲಿಗೆ ಯಾವ ಅಧಿಕಾರಿಯೂ ಹೋಗಿಯೇ ಇಲ್ಲ. ವಾಣಿವಿಲಾಸ ಸಾಗರದ ನೀರು ಈ ಹೋಬಳಿಗಳಿಗೆ ದೊರೆಯದೆ ಇರುವುದರಿಂದ ಅವರಿಗೆ ಬಹಳ ಕಷ್ಟಗಳಿವೆ.

2-30 P.M.

ಈ ದೃಷ್ಟಿಯಿಂದ ನಾವು ಮುಖ್ಯವಾದ ಸ್ಥಳಗಳಲ್ಲಿ ನೀರಾವರಿ ಯೋಜನೆಗೋಸ್ಕರ, ಭಾವಿಯಿಂದ ನೀರನ್ನು ಎತ್ತುವುದಕ್ಕೆ ಎಲೆಕ್ಟ್ರಿಸಿಟಿಯನ್ನು ಉಪಯೋಗಿಸುವಂತೆ ಮಾಡಿ ಕಪಿಲೆಗಳ ಮೂಲಕ ನೀರನ್ನು ತೆಗೆಯುವುದನ್ನು ತಪ್ಪಿಸಬೇಕು. ಇಷ್ಟೆಲ್ಲ ಮಾಡಲು ಇಂತಹ ಸುಯೋಗ ಮತ್ತು ಸುಸಮಯ ಈಗ ಒದಗಿದೆ. ನಾನು ಹೀಗೆ ಹೇಳುತ್ತೇನೆಂದು ತಾವು ಏನೂ ತಿಳಿದುಕೊಳ್ಳಬಾರದು. ಇಲ್ಲಿ ಎಷ್ಟೋ ಸಣ್ಣ ಸಣ್ಣ ಕೆರೆಗಳಿವೆ. ಈ ಕೆರೆಗಳನ್ನು ದುರಸ್ತಿ ಮಾಡುವುದರಿಂದ, ಬಾವಿಯಿಂದ ನೀರನ್ನು ತೆಗೆಯಲು ಎಲೆಕ್ಟ್ರಿಸಿಟಿ ಕೊಡುವುದರಿಂದ ಬಹಳ ಉಪಯೋಗವಾಗುತ್ತದೆ. ಈಗ ಎಲೆಕ್ಟ್ರಿಸಿಟಿಗಾಗಿ ಬೇಕಾದಷ್ಟು ದುಡ್ಡನ್ನು ಖರ್ಚುಮಾಡುತ್ತಿದ್ದೀರಿ. Total outlayಯು ಶೇಕಡ 2.5 ರಷ್ಟು ದುಡ್ಡುಬರುವ ಸ್ಥಿತಿಯಲ್ಲಿದ್ದರೆ ಮಾತ್ರ ವಿದ್ಯುಚ್ಛಕ್ತಿ ಕೊಡಬಹುದು ಮತ್ತು 70 ಪರ್ಸೆಂಟು Completion Certificate ಬಂದರೆ ಮಾತ್ರ ವಿದ್ಯುಚ್ಛಕ್ತಿ ಕೊಡಬಹುದು ಎಂದು ಮಾಡಲಾಗಿದೆ. ಎಂದರೆ, ಒಂದುನೂರು ಜನ ಎಲೆಕ್ಟ್ರಿಸಿಟಿಗಾಗಿ ಅರ್ಜಿ ಕೊಟ್ಟರೆ ಅವರಲ್ಲಿ ಎಪ್ಪತ್ತು ಜನ ವಿದ್ಯುಚ್ಛಕ್ತಿ ತೆಗೆದುಕೊಂಡು ಉಪಯೋಗಿಸಬೇಕು ಎನ್ನುವ ವಿಚಾರವನ್ನು ಹೇಳಿದಿರಿ. ಈ ನಿಯಮದಂತೆ ಏನೇನೂ ಮಾಡುವುದಕ್ಕಾಗುವುದಿಲ್ಲ. ನೀರಿಗಾಗಿ ಕೊಡುವ ಪವರನ್ನು ಹಗಲನಲ್ಲಿ ಕೊಡದೆ ರಾತ್ರಿ ವೇಳೆ ಕೊಡುವುದು, ಅದಕ್ಕೆ 2.5 ರಷ್ಟು ರಿಟರ್ನ್ ಬರಬೇಕೆಂದು ಶರತ್ತುಹಾಕಿರುವುದು, ಇದರಲ್ಲೂ ಶೇಕಡ ಎಪ್ಪತ್ತರಷ್ಟು Completion Certificate ಬರಬೇಕೆಂದು ಹೇಳಿರುವುದು ಹಳ್ಳಿಗಾಡಿನ ವರ್ಗದವರಿಗೆ ಅನಾನುಕೂಲವಾಗಿದೆ. ಈ ವಿಚಾರಗಳನ್ನೆಲ್ಲ ಪರಿಶೀಲಿಸಿ ನೀವು ಜಾಗತ್ರೆಯಾಗಿ ಸರಿಪಡಿಸಬೇಕು. ಈ ಷರತ್ತುಗಳನ್ನು ತೆಗೆದುಹಾಕಿದ್ದರೆ ಆಗ ರೈತರು ಪವರನ್ನು ಖಂಡಿತವಾಗಿಯೂ ತೆಗೆದುಕೊಳ್ಳುತ್ತಾರೆ. ಈಗ ಇಂತಹ ಕಡೆಗಳಲ್ಲಿ ಬಾವಿಯಿಂದ ನೀರನ್ನು ತೆಗೆದುಕೊಂಡು, ಕಪಿಲೆಯಿಂದ ಎತ್ತಿ ಜಮೀನನ್ನು ಸಾಗುವಳಿಮಾಡಬೇಕಾಗಿದೆ. ತುಂಗಭದ್ರ ದ ಯೋಜನೆಯಿಂದ ಪವರು ಬರುತ್ತದೆ ಎಂದರೂ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇಲ್ಲಿನ ಜನರು ಬಾವಿಯಿಂದ ನೀರನ್ನು ಎತ್ತಿ ಇವರ ಮಾಡುತ್ತಿರುವ ಜೀವನ ಬಹಳ ಕಷ್ಟವಾಗಿದೆ, ಇದು ಎಷ್ಟು ನ್ಯಾಯಸಮ್ಮತವಾದುದು ಎನ್ನತಕ್ಕ ವಿಚಾರ ಎನ್ನುವುದನು ನೋಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಇದಕ್ಕಾಗಿ ಸೂಕ್ತವಾದ ರೂಲ್ಸುಗಳನ್ನು ಮಾಡಲು ಎಲೆಕ್ಟ್ರಿಸಿಟಿ ಬೋರ್ಡಿನವರೊಡನೆ ಮಾತುಕತೆನಡೆಸಬೇಕು. ಇಂತಹ Conditions ಈ ಸ್ಥಳಗಳಲ್ಲಿ insist ಮಾಡಬೇಡಿ. ಈಗ ಒಂದು ಜೊತೆ ಎತ್ತು ತೆಗೆಯಬೇಕಾದರೆ ಒಂದು ಸಾವಿರ ರೂಪಾಯಿಗಳಾಗುತ್ತದೆ. ಇವತ್ತಿನ ದಿವಸ Completion Certificate ಹರಿಹರಕೆರೆ, ಬೆಟ್ಟೂರು ಇತ್ಯಾದಿ ಸ್ಥಳಗಳಲ್ಲಿ ಕೊಡಬೇಕೆಂದು ಮಾಡಿದರೆ ಅಲ್ಲಿಯ ಎಲ್ಲಾ ಜನರಿಗೆ ವಿದ್ಯುಚ್ಛಕ್ತಿ ತೆಗೆದುಕೊಳ್ಳಲು ಶಕ್ತಿಯಿರು

(ಶ್ರೀ ಕೆ. ಕೆಂಚಪ್ಪ)

ವುದಿಲ್ಲ. ಇನ್ನು ಶೇಕಡ ಎಪ್ಪತ್ತರಷ್ಟು ಜನರು ತೆಗೆದುಕೊಳ್ಳುತ್ತೇವೆಂದು ಕಂಪ್ಲೀಷನ್ ರಿಪೋರ್ಟ್ ಕಳುಹಿಸಿದರೂ ನಮಗೆ Transformer ಇಲ್ಲ, Copper Wire ಇಲ್ಲ ಮತ್ತು Exchange ಗಳಿಗಾಗಿ ಏನೇನೋ ಕಷ್ಟಗಳಿರುವುದರಿಂದ ಇವನ್ನು ಕೊಂಡುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇವನ್ನೆಲ್ಲ ತಾವು ಯೋಚನೆಮಾಡಿ. ಕಷ್ಟಪಡುತ್ತಿರುವವರ ಕೈಯಲ್ಲಿರುವ ದುಡ್ಡನ್ನು ಹಾಳುಮಾಡಬೇಕೆಂದು, ಮಾಡುವುದು ಸರಿಯಲ್ಲ. ಅವರು ಗೊಬ್ಬರ ಗೋಡಿಗೆ ಖರ್ಚುಮಾಡುವುದನ್ನು ಬಿಟ್ಟು ಪವರಿಗಾಗಿ ಹಾಕಿಬಿಡಬೇಕಾಗಿ ಬರುತ್ತದೆ. ಇವರಲ್ಲಿ ಬಹುಭಾಗ ಹೊಲ ಮಾಡತಕ್ಕವರು, ಕಪಿಲೆಯಿಂದ ಜೀವನಮಾಡತಕ್ಕವರು,. ಇಂತಹವರ ವಿಷಯದಲ್ಲಿ ಏಕೆ ಅನುಮಾನ, ಮಾಡಿಕೊಡಬೇಕ ! ಜಾಗ್ರತೆಯಾಗಿ ಮತ್ತು ಇನ್ನೂ ಹೆಚ್ಚಾಗಿ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಬೇಕಾದರೆ ತಮ್ಮಲ್ಲಿರತಕ್ಕ ಅಧಿಕಾರಿಗಳಲ್ಲಿ ಯಾರನ್ನಾದರೂ ಕಳುಹಿಸಿ, ಈ ವಾಣೀವಿಲಾಸ ಸಾಗರದ ಕೆಳಗೆ ಜನರು ಹೇಗೆ ಜೀವನಮಾಡುತ್ತಿದ್ದಾರೆ ಎನ್ನುವುದು ಚೆನ್ನಾಗಿ ತಿಳಿಯುತ್ತದೆ. ಇಂತಹ ಹಳ್ಳಿಗಳಿಗೆ ಅಲ್ಲಿನ ಜನರ ಜೀವನವನ್ನು ನೋಡಲು ನೀವು ಏತಕ್ಕೆ ಬರುತ್ತೀರಿ? ಅಲ್ಲಿಗೆ ಬಂದು ನೋಡಿದ್ದರೆ ಅಲ್ಲಿನ ಬರಗಾಲದ ಪರಿಸ್ಥಿತಿ ತಮ್ಮ ಗಮನಕ್ಕೆ ಬರುತ್ತಿತ್ತು. ಇಲ್ಲಿನ ಹಳ್ಳಿಯ ಜನಗಳೆಲ್ಲ ಅವರ ಜೀವನ ಸಾಗಿಸಲು ಕಷ್ಟವಾಗಿ ಕಾಳುಕಡ್ಡಿಗಳಿಗಾಗಿ ಬೇರೆ ಕಡೆ ಕೆಲಸಕ್ಕಾಗಿ ಹೋಗಿ ಜೀವನಮಾಡುತ್ತಿದ್ದಾರೆ. ಅವರಿಗೆ ಅನುಕೂಲವಾದ ಸ್ಥಿತಿ ಇದ್ದರೆ ಅವರೇಕೆ ಕೆಲಸಕ್ಕಾಗಿ ಬೇರೆ ಕಡೆಗೆ ಹೋಗಬೇಕು ? ಈ ರೀತಿಯಾಗಿ ಚಿತ್ರದುರ್ಗದ Area ದಲ್ಲಿ ಒಂದು ಹಳ್ಳಿಗೆ ಬಂದ 50, 60, 100 ಹೀಗೆ ಗುಡಿಸಿಲುಗಳನ್ನು ಕಟ್ಟಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಲಕ್ಷ್ಮೀಸಾಗರದ ಬಳಿ ಸುಮಾರು 500 ಜನ ಹಳ್ಳಿಯವರು ನಮ್ಮ ಹಿರಿಯೂರು ತಾಲ್ಲೂಕಿನಲ್ಲಿ ಮಣ್ಣು ಹೇರುವ ಕೆಲಸಕ್ಕೆ ಕೋಣನನ್ನು ಉಪಯೋಗಿಸಿ ಕೆಲಸಮಾಡುತ್ತಿದ್ದಾರೆ. ಮಣ್ಣನ್ನು ಹೊತ್ತುಕೊಂಡು ಜೀವನ ನಡೆಸಬೇಕಾದರೆ ಇವರ ಜೀವನ ಎಷ್ಟು ಕಷ್ಟವಾಗಿದೆ ಎನ್ನುವುದನ್ನು ಆಲೋಚನೆಮಾಡಬೇಕು. ಆದ್ದರಿಂದ ಇಲ್ಲಿ ಹೆಚ್ಚಾಗಿ ಕೆಲಸಗಳನ್ನು ತೆಗೆದುಕೊಳ್ಳಬೇಕು. ಇವತ್ತಿನ ದಿವಸ ಈ ವಿಚಾರವನ್ನು ಅಧಿಕಾರಿಗಳಿಗೆ ಹೇಳಿದರೆ ಅವರು ಇದನ್ನು ಪರಿಶೀಲಿಸಲು ಖಂಡಿತವಾಗಿಯೂ ಬರುವುದಿಲ್ಲ. ನಾನು ಕೆಳಗಿನ ಅಧಿಕಾರಿಗಳ ವಿಷಯದಲ್ಲಿ ಅವರ ಸಹಾಯವನ್ನು ಕೇಳುತ್ತಿಲ್ಲ. ಆದರೆ ಈ ಪ್ರಶ್ನೆಯನ್ನು ತಾವು ಇನ್ನೂ ದೊಡ್ಡ ಮನಸ್ಸುಮಾಡಿ ಇವರಿಗಾಗಿ ಎಷ್ಟು ದುಡ್ಡನ್ನಾದರೂ ಕೊಡಬಹುದು. ಆದರೆ ಅದನ್ನು ಖರ್ಚುಮಾಡದಿದ್ದರೆ ಇವರಿಗೇನೂ ಅನುಕೂಲವಾಗುವುದಿಲ್ಲ ; ಇದಕ್ಕೆ ತಕ್ಕ ಶಾಸನವನ್ನಾದರೂ ಮಾಡಿ ಅವರಿಗೆ ತಕ್ಕಷ್ಟು ರಕ್ಷಣೆಯನ್ನು ಕೊಟ್ಟರೆ ರಕ್ಷಣೆ ದೊರೆಯುತ್ತದೆ. ಹಾಗಿಲ್ಲದಿದ್ದರೆ ನಮ್ಮ ಉದ್ದೇಶ ಸಾಧನೆಯಾಗುವುದಿಲ್ಲ. ಆದುದರಿಂದ ಇಷ್ಟನ್ನಾದರೂ ಮಾಡಿಸಿಕೊಡಬೇಕು. ಇಷ್ಟರ ಮಟ್ಟಿಗೆ ಕೊಡಲಿಕ್ಕೆ ಬೇಕು. ಆದುದರಿಂದ ತಾವು ಇದನ್ನು ಅನುಮೋದಿಸಿ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಂಡು ಗ್ರಾಮಾಂತರದವರ ಕಷ್ಟಗಳನ್ನು ಪರಿಹರಿಸಿ ಜನ ಜಾನುವಾರುಗಳಿಗೆ ಪರಿಹಾರ ಕೊಡುವುದಕ್ಕೂ ಏರ್ಪಾಡುಮಾಡಬೇಕೆಂದು ನಾನು **ಅತಿ ವಿನಯದಿಂದ ಬೇಡಿಕೊಳ್ಳುತ್ತೇನೆ.**

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಶಾಖಾ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಕೆಂಚಪ್ಪನವರು ತಂದಿರುವ ನಿರ್ಣಯ ಈ ರೀತಿ ಇದೆ:

"ಸಕಾಲಕ್ಕೆ ಮಳೆ ಬೀಳದೆ ಹೋದ ಪ್ರಯುಕ್ತ ಈಗಿರತಕ್ಕ ದುರ್ಭಿಕ್ಷ ಪರಿಸ್ಥಿತಿಯಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಹಿರಿಯೂರು, ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳನ್ನೂ ತುಮಕೂರು ಡಿಸ್ಟ್ರಿಕ್ಟಿನ ಪಾವಗಡ, ಸೀರ್ಯ, ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕುಗಳನ್ನೂ ಮತ್ತು ಬಿಜಾಪುರ ಡಿಸ್ಟ್ರಿಕ್ಟಿನ ಉತ್ತರದ ನಾಲ್ಕು ತಾಲ್ಲೂಕುಗಳನ್ನೂ "ದುರ್ಭಿಕ್ಷ" ಪ್ರದೇಶಗಳೆಂಬುದಾಗಿ ಪ್ರಕಟಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಸ್ವಾಮಿ, ರಾಜ್ಯದ ಕೆಲವು ಭಾಗಗಳಲ್ಲಿ ಒಂದು ಕಡೆ ಇದ್ದಂತಹ ಪರಿಸ್ಥಿತಿ ಮತ್ತೊಂದು ಕಡೆ ಇರುವುದಿಲ್ಲ. ಪ್ರಕೃತಿದೇವಿಯ ಚಂಚಲ ಸ್ವಭಾವದಿಂದ ಈ ರೀತಿಯಾದ ಅಭಾವ ಪರಿಸ್ಥಿತಿಯುಂಟಾಗುತ್ತದೆ. ಇದು Vagaries of Nature ಎನ್ನುವ ಹಾಗಿದೆ. ಈ ಅಭಾವ ಪರಿಸ್ಥಿತಿ ಮೈಸೂರು ರಾಜ್ಯಕ್ಕೆ ಹೊಸದೇನೂ ಅಲ್ಲ. 1952ನೆಯ ಇಸವಿಯಲ್ಲಿಯೇ ಹಳೆಯ ಮೈಸೂರು ರಾಜ್ಯದ ಕೆಲವು ಭಾಗಗಳಲ್ಲಿ ಭೀಕರ ಅಭಾವ ಪರಿಸ್ಥಿತಿ ಉಂಟಾಗಿತ್ತು. ಮಾನ್ಯ ಸ್ನೇಹಿತರಾದ ಶ್ರೀಮಾನ್ ಕೆಂಚಪ್ಪನವರು ಬೇಜವಾಬ್ದಾರಿ ಸರಕಾರ ಆಡಳಿತ ನಡೆಸುತ್ತಿದ್ದ ಕಾಲದಲ್ಲಿ ಈರೀತಿ ಯಾದ ಪರಿಸ್ಥಿತಿ ಉಂಟಾಗಿದ್ದರೆ ಬಹಳ ಗಲಾಟೆ ನಡೆಯುತ್ತಿತ್ತು ಮತ್ತು ಅವರೂ ಕೂಡ ಹೆಚ್ಚಿನ ನಿಗಾ ವಹಿಸುತ್ತಿದ್ದರು ಎಂದು ವಾದ ಮಾಡಿದರು. ನಾನು ಹಳೆಯ ಮೈಸೂರು ರಾಜ್ಯದ ಅನೇಕ ಭಾಗಗಳನ್ನು ನೋಡಿದ್ದೇನೆ. ಅಭಾವದ ಪರಿಸ್ಥಿತಿಯನ್ನೂ ನೋಡಿದ್ದೇನೆ. 1952 ಮತ್ತು 1953ನೆಯ ಇಸವಿಯಲ್ಲಿ ಹಳೆಯ ಮೈಸೂರು ರಾಜ್ಯದಲ್ಲಿ ನಾನೇ ರೆವಿನ್ಯೂ ಮಂತ್ರಿಯಾಗಿದ್ದೆ. ಆಗ ಭೀಕರವಾದ ಪರಿಸ್ಥಿತಿ ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಮತ್ತು ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಉಂಟಾಗಿತ್ತು. ಸುಮಾರು ಎರಡು ಕೋಟಿ ರೂಪಾಯಿಗಳನ್ನು ಆಕಾಲದಲ್ಲಿ ಸರ್ಕಾರದವರು ಖರ್ಚು ಮಾಡಿದರು. ಆದ್ದರಿಂದ ಬೇಜವಾಬ್ದಾರಿ ಸರ್ಕಾರದವರು ಜವಾಬ್ದಾರಿ ಸರ್ಕಾರಕ್ಕಿಂತ ಹೆಚ್ಚಿಗೆ ಆಸಕ್ತಿವಹಿಸುತ್ತಾರೆ ಎಂದು ಹೇಳುವುದು ನ್ಯಾಯವಲ್ಲ ಎಂದು ವಿನಯಪೂರ್ವಕವಾಗಿ ಅವರಲ್ಲಿ ನಾನು ಅರಿಕೆಮಾಡಿಕೊಳ್ಳುತ್ತೇನೆ. ಕಳೆದವರ್ಷ ಮತ್ತು ಈ ವರ್ಷ ಕೂಡ ಅಭಾವ ಪ್ರದೇಶದಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ...............

ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಕೋಲಾರದಲ್ಲಿ ಎರಡು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರಿಂದ ಕ್ಷಾಮ ಪರಿಸ್ಥಿತಿ ಕಡಿಮೆಯಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಎರಡು ಕೋಟಿ ರೂಪಾಯಿಗಳ ಜೊತೆಗೆ ಶಾಶ್ವತವಾದ ಕೆಲವು ಕಾಮಗಾರಿಗಳನ್ನು ಕೈಗೊಂಡಿದ್ದೇವೆ.

ಮಾನ್ಯ ಸಭೆಗೆ ಗೊತ್ತಿರುವಂತೆ 1951ನೆಯ ಇಸವಿಯಲ್ಲಿ ಕೆಲವು ದೊಡ್ಡದಾದ ಕಾಮಗಾರಿಗಳನ್ನು, ದುಡ್ಡು ಇಲ್ಲದೆ ಇದ್ದುದರಿಂದ ನಿಧಾನವಾಗಿ, ಕೈಗೊಳ್ಳಬೇಕು ಎಂದು ಕೇಂದ್ರ ಸರ್ಕಾರದವರು ಹೇಳಿದರು.

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ನಿಧಾನ ನೀತಿ ಆಲಸ್ಯ ನೀತಿಯಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಹಣ ಇಲ್ಲದೆ ಇರುವುದರಿಂದ ಭದ್ರಾ ಜಲಾಶಯ, ತುಂಗಾ ಜಲಾಶಯ ಮತ್ತು ನುಗು ಜಲಾಶಯ—ಈ ಮೂರು ನೀರಾವರಿ ಕಾಮಗಾರಿಗಳನ್ನು ನಿಧಾನವಾಗಿ ಕಾರ್ಯಗತ ಮಾಡಬೇಕು, ಜಾಗ್ರತೆಮಾಡುವುದಕ್ಕಾಗುವುದಿಲ್ಲ ಎಂದು ಒಂದು ನೀತಿಯನ್ನು ನಮ್ಮ ಸರ್ಕಾರದವರು ಅನುಸರಿಸಿಕೊಂಡು ಬಂದಿದ್ದರು. 1952ನೆಯ ಇಸವಿಯಲ್ಲಿ ಅಭಾವ ಉಂಟಾದುದರ ಪರಿಣಾಮವಾಗಿ ಈ ಸರ್ಕಾರದವರು, ಪ್ಲಾನಿಂಗ್ ಕಮಿಷನ್‌ನವರನ್ನು ಮತ್ತು ಕೇಂದ್ರ ಸರ್ಕಾರದವರನ್ನು ಕಂಡು ಪರಿಸ್ಥಿತಿಯನ್ನು ವಿವರಿಸಿದ ಮೇಲೆ ಅವರು ಶ್ರೀ ರಾಮಮೂರ್ತಿಯವರನ್ನು ಕಳುಹಿಸಿದರು. ಅವರು ಇಲ್ಲಿ ಬಂದು ನೋಡಿದಮೇಲೆ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸಿಕೊಟ್ಟರು. ಆ ವರದಿಗೆ ಅನುಗುಣವಾಗಿ ಕೇಂದ್ರ ಸರ್ಕಾರದವರು ಕೆಲವು ಕೋಟಿಗಳನ್ನು ಈ ಸರ್ಕಾರಕ್ಕೆ ಸಾಲದ ರೂಪವಾಗಿ ಕೊಟ್ಟಿದ್ದಾರೆ. ಆ ಸಾಲದ ರೂಪವಾಗಿ ಬಂದ ಹಣದಿಂದ ಮೂರು ಕಾಮಗಾರಿಗಳನ್ನು ಎಂದರೆ ತುಂಗ, ಭದ್ರಾ, ನುಗು—ಈ ಮೂರು ಕಾಮಗಾರಿಗಳನ್ನು ಕಾರ್ಯಗತಮಾಡುವುದಕ್ಕೆ ಅವಕಾಶವಾಯಿತು. ಅದೇರೀತಿ ಶ್ರೀ ಕೆಂಚಪ್ಪನವರ ತಾಲ್ಲೂಕಿಗೆ ಉಪಯುಕ್ತವಾದ ಗಾಯತ್ರಿ ಜಲಾಶಯವನ್ನು ಕೈಗೊಳ್ಳಲು ಕಾರಣವಾಯಿತು. ಅಭಾವ ಪರಿಸ್ಥಿತಿಯನ್ನು ಶಾಶ್ವತವಾಗಿ ನಿವಾರಣೆಮಾಡುವ ಉದ್ದೇಶಕ್ಕಾಗಿ ಈ ದೊಡ್ಡ ನೀರಾವರಿ ಕಾಮಗಾರಿಗಳು ಉಪಯುಕ್ತವಾಗಿವೆ. ತುಂಗಭದ್ರಾ ಜಲಾಶಯದಿಂದ ಕೆಲವು ಅಭಾವ ಪ್ರದೇಶಗಳಿಗೂ ಅಂತೆಯೇ ಭದ್ರಾ ಜಲಾಶಯದಿಂದ ಕೆಲವು ಅಭಾವ ಪ್ರದೇಶಗಳಿಗೂ ಪ್ರಯೋಜನ ಉಂಟಾಗುತ್ತದೆ. ಗಾಯತ್ರಿ ಜಲಾಶಯ ಮತ್ತು ಘಟಪ್ರಭಾ ಜಲಾಶಯ ಇವುಗಳಿಂದ ಕೂಡ ಶಾಶ್ವತವಾದ ಪರಿಹಾರ ಉಂಟಾಗಿದೆ ಎಂದು ನಾನು ಈ ಸಭೆಯಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಒಬ್ಬ ಸದಸ್ಯರು.—ಕೋಲಾರದಲ್ಲಿ ಏನು ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—1952ನೆಯ ಇಸವಿಯಿಂದ 1954 55ನೆಯ ಇಸವಿಯವರೆಗೆ ಅನೇಕ ನೀರಾವರಿ ಕಾಮಗಾರಿಗಳನ್ನು ಕೆಲವು ದೊಡ್ಡ ಕೆರೆಗಳ ನಿರ್ಮಾಣದ ಕಾರ್ಯವನ್ನೂ ಕೂಡ ಕೈಗೊಂಡಿದ್ದಾಗಿದೆ. ಇದು ಕೋಲಾರ ಜಿಲ್ಲೆಯಿಂದ ಬಂದಿರತಕ್ಕ ಮಾನ್ಯ ಸದಸ್ಯರಿಗೆ ಗೊತ್ತಿದೆ. ಎಲ್ಲೆಲ್ಲಿ ನೀರನ್ನು ಒದಗಿಸುವುದಕ್ಕೆ ಅವಕಾಶವಿದೆಯೋ ಅದನ್ನೆಲ್ಲಾ ಪೂರೈಸಿದ್ದೇವೆ. ಇನ್ನು ಮದ್ರಾಸ್ ರಾಜ್ಯಕ್ಕೂ ನಮ್ಮ ರಾಜ್ಯಕ್ಕೂ ಇರತಕ್ಕ ಒಪ್ಪಂದಕ್ಕೆ ಸಂಬಂಧಪಟ್ಟ ಕೆಲವು ನೀರಾವರಿ ಕಾರ್ಯಗಳನ್ನು ಕಾರ್ಯಗತ ಮಾಡಬೇಕಾದದ್ದು ಯುಕ್ತ. ಆದರೆ ಕೆಲವು ತೊಡಕುಗಳ ದೆಸೆಯಿಂದ ಕಾರ್ಯಗತಮಾಡುವುದಕ್ಕೆ ಆಗುತ್ತಿಲ್ಲ. ಕೋಲಾರದ ವಿಷಯದಲ್ಲಿ ನಾನು ಲೋಕೋಪಯೋಗಿ ಖಾತೆಯ ಮಂತ್ರಿಯಾಗಿದ್ದಾಗ ಸಣ್ಣ ಕಾಮಗಾರಿಗಳನ್ನು ಮಾಡಿಸ್ಸೇನೆ.

ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ತುಮಕೂರು ಜಿಲ್ಲೆಯವರಿಗೆ ಪ್ರೈಂ ಮಿನಿಸ್ಟರು ಟೂರುಮಾಡಿದ ಕಾಲದಲ್ಲಿ ಪ್ರೈಂ ಮಿನಿಸ್ಟರು ಕೂಡ ಇಲ್ಲಿ ಸ್ವಲ್ಪ ಕೆಲಸ ಮಾಡಬೇಕು ಎಂದು ಹೇಳಿದ್ದರು. ನಾವು ಇಲ್ಲಿ ಆಗಾಗ್ಯೆ ಕ್ಷಾಮ ಬರುತ್ತದೆ ಎಂದು ಹೇಳಿದರೂ ಕೂಡ ಅಲ್ಲಿ ಏನು ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ತುಮಕೂರು ಜಿಲ್ಲೆಯಲ್ಲಿ ಕೆಲವು ಸಣ್ಣ ಪುಟ್ಟ ಕೆರೆಗಳ ಜೀರ್ಣೋದ್ಧಾರ ನಡೆದಿವೆ: ಅದರ ಜೊತೆಗೆ ನೀರಾವರಿ ಬಾವಿಗಳನ್ನು ತೋಡಿಸುವ ಬಗ್ಗೆ ಸಬ್‌ಸಿಡಿ ಕೊಡಲಾಗಿದೆ ಮತ್ತು ಸಾಲ ಕೊಡಲಾಗಿದೆ. ಅಭಾವ ಸಮಸ್ಯೆಯನ್ನು ನಾನು ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಅಭಾವ ಪರಿಸ್ಥಿತಿ ಶಾಶ್ವತವಾಗಿ ಉಂಟಾಗದಂತೆ ಮಾಡುವುದಕ್ಕೆ ಕೆಲವು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಮೊದಲನೆಯದಾಗಿ ನಾನು ಹೇಳಿದಂತೆ ದೊಡ್ಡ ನೀರಾವರಿ ಯೋಜನೆಗಳು, ಎರಡನೆಯದಾಗಿ ಕೆರೆಗಳ ಜೀರ್ಣೋದ್ಧಾರ ಕಾರ್ಯ ಮತ್ತು ಹೊಸ ಕೆರೆಗಳನ್ನು ಕಟ್ಟಿಸುವುದು, ಅವುಗಳ ಜೊತೆಗೆ ಗ್ರಾಮಾಂತರ ಪ್ರದೇಶದಲ್ಲಿ ಸಣ್ಣಪುಟ್ಟ ಕೈಗಾರಿಕೆಗಳನ್ನು ಸ್ಥಾಪಿಸುವುದು ಅಗತ್ಯ. ಸಣ್ಣ ಪುಟ್ಟ ಕೈಗಾರಿಕೆಗಳು ಎಂದರೆ ಮೆಟ್ಟು ಹೊಲಿಯುವುದು, ಚಾಪೆ ಹೆಣೆಯುವುದು ಇಂಥ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ನನ್ನ ಮನಸ್ಸಿನಲ್ಲಿ ಇಲ್ಲ. ಜಪಾನ್ ದೇಶದಲ್ಲಿ ಯಾವ ಮಾದರಿಯಲ್ಲಿ ಸಣ್ಣಪುಟ್ಟ ಕೈಗಾರಿಕೆಗಳನ್ನು ಹಳ್ಳಿಗಳಲ್ಲಿ ಸ್ಥಾಪನೆಮಾಡಿ ಅವುಗಳ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಪರಿಹಾರಮಾಡಿದಾರೋ ಆ ಮಾದರಿಯಲ್ಲಿ ನಮ್ಮ ಹಳ್ಳಿಗಾಡಿನಲ್ಲಿ ಸಣ್ಣಪುಟ್ಟ ಕೈಗಾರಿಕೆಗಳನ್ನು ಸ್ಥಾಪಿಸಬೇಕಾಗಿದೆ. ಅದರ ಜೊತೆಗೆ ವಿದ್ಯುಚ್ಛಕ್ತಿ ಅಭಾವ ಕಡಮೆಯಾದಂತೆ ಇಲ್ಲ. ನೀರಾವರಿ ಭಾವಿಗಳಿಗಾಗಿ ಹೆಚ್ಚಿಗೆ ಹಣವನ್ನು ಕೊಡತಕ್ಕದ್ದು ಅವಶ್ಯಕ. ವಿದ್ಯುಚ್ಛಕ್ತಿಗೆ ಅಭಾವ ಒದಗಿರುವುದರಿಂದ ಸಾಕಾದಷ್ಟು ಪ್ರಮಾಣದಲ್ಲಿ ಹಳ್ಳಿಗಾಡಿನ ಜನರಿಗೆ ನೀರಾವರಿ ಭಾವಿಗಳಿಗೋಸ್ಕರ ಸಹಾಯಮಾಡುವುದಕ್ಕೆ ಅವಕಾಶವಿಲ್ಲವಾಗಿದೆ. ಶರಾವತಿ ಯೋಜನೆ ಕಾರ್ಯಗತವಾದನಂತರ ವಿದ್ಯುಚ್ಛಕ್ತಿಯನ್ನು ಅಭಾವ ಪ್ರದೇಶಗಳಿಗೆ ಹೆಚ್ಚು ಪ್ರಮಾಣದಲ್ಲಿ ಒದಗಿಸುವುದಕ್ಕೆ ಸಾಧ್ಯವಿದೆ. ಆರೀತಿ ಮಾಡಿದರೆ ಅಭಾವ ಪರಿಸ್ಥಿತಿ ಬಹುಮಟ್ಟಿಗೆ ಕಡಮೆ ಆಗಬಹುದು ಎಂದು ನಿರೀಕ್ಷಣೆಮಾಡುತ್ತೇವೆ.

ಶ್ರೀ ಕೆ. ಕೆಂಚಪ್ಪ.—ಶರಾವತಿ ವ್ಯಾಲಿ ಪ್ರಾಜೆಕ್ಟ್ ಮುಗಿದಮೇಲೆ ಪವರ್ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಸಾಧನ ಸಂಪತ್ತುಗಳಿಗೆ ಅನುಗುಣವಾಗಿ ವಿದ್ಯುಚ್ಛಕ್ತಿಯನ್ನು ಮತ್ತು ಧನಸಹಾಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಕೆಂಚಪ್ಪ.—ಬರಗಾಲ ಪರಿಸ್ಥಿತಿಗೋಸ್ಕರ ಜಾಗ್ರತೆಯಾಗಿ ವಿದ್ಯುಚ್ಛಕ್ತಿಯನ್ನು ಒದಗಿಸುವ ಮೂಲಕ ಜೀವನಕ್ಕೆ ಆಧಾರವಾಡಿ ಎಂದು ಹೇಳಿದೆ.

ಶ್ರೀ ಕಡಿದಾಳ್ ಮಂಜಪ್ಪ.—ರೈತರಿಗೆ ಸಹಾಯ ಮಾಡುವ ವಿಚಾರದಲ್ಲಿ ಕಾನೂನು ಅಡ್ಡಿ ಆತಂಕಗಳು ಬರಬಾರದು ಎಂಬುದೇ ನನ್ನ ಆಶೆ.

ಶ್ರೀ ಇ. ನಾರಾಯಣಗೌಡ (ಮಳಬಾಗಿಲು).—ಈಗ ಕೊಡುತ್ತಿರುವ ಸಬ್ಸಿಡಿ 250 ರೂಪಾಯಿಗಳು ಸಾಕಾಗುವುದಿಲ್ಲ. ಅದನ್ನು ಒಂದು ಸಾವಿರ ರೂಪಾಯಿಗಳಿಗೆ ಏರಿಸುವ ವಿಚಾರ ಸರ್ಕಾರದಲ್ಲಿ ಇದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಚಾರದಲ್ಲಿ ನಮ್ಮ ಸರ್ಕಾರಕ್ಕೂ ಕೇಂದ್ರ ಸರ್ಕಾರದವರಿಗೂ ಪತ್ರ ವ್ಯವಹಾರ ನಡೆದಿದೆ. ಅಭಾವ ಪ್ರದೇಶಗಳಿಗೆ ಸಬ್ಸಿಡಿ ಮತ್ತು ಲೋನ್ ಹಣವನ್ನು ಸ್ವಲ್ಪ ಹೆಚ್ಚು ಕೊಡಬೇಕು

(ಶ್ರೀ ಕಡಿದಾಳ್ ಮಂಜಪ್ಪ)

ಎಂದು ಕೇಂದ್ರ ಸರ್ಕಾರದವರಿಗೂ ಪ್ಲಾನಿಂಗ್ ಕಮೀಷನ್‌ನವರಿಗೂ ತಿಳಿಸಿದ್ದೇವೆ. ಕೆಲವು ತಿಂಗಳ ಹಿಂದೆ ಶ್ರೀಮಾರ್ ನಾರಾಯಣ್ ಅವರು ಇಲ್ಲಿಗೆ ಬಂದಿದ್ದಾಗ.........

ಶ್ರೀ ಬಿ. ಕೆ. ಪಟ್ಟರಾಮಯ್ಯ.—ಶ್ರೀಮಾರ್ ನಾರಾಯಣ್ ಅವರಿಗೂ ಈ ಹೌಸಿಗೂ ಏನು ಸಂಬಂಧ ಇದೆ?

ಶ್ರೀ ಕೆ. ಎಲ್. ನರಸಿಂಹಯ್ಯ.—ಲಕ್ಷ್ಮೀ ಸಮೇತನಾಗಿ ಬಂದಿದ್ದಾನೋ ಅಥವಾ ಶ್ರೀಮಾರ್ ನಾರಾಯಣ ಒಬ್ಬರೇ ಬಂದಿದ್ದಾರೋ?

Sri M. C. NARASIMHAN (Kolar Gold Fields).—So far as sharing of water between Madras and Mysore in respect of Palar is concerned, that does not seem to be included in the terms of reference before the Committee which has been appointed for going into that question. Would you kindly tell me as to whether this matter of sharing of Palar water and revision of agreement between the Madras and Mysore will be taken up?

Sri Kadidal MANJAPPA.—I do not know what exactly are the terms of reference to that Committee? Anyhow, the suggestion will be borne in mind by the Government.

ವಿದ್ಯುಚ್ಛಕ್ತಿ ಅಭಾವ ಕಡಮೆ ಆದನಂತರ ಅಭಾವ ಪ್ರದೇಶಗಳಿಗೆ ಹೆಚ್ಚು ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಿದೆ. ಅಲ್ಲಿ ಏವರೆಗೆ ತೊಂದರೆಪಡಬೇಕಾಗಿದೆ. ರಾತ್ರಿ ವಿದ್ಯುಚ್ಛಕ್ತಿಯನ್ನು ಒದಗಿಸುವ ಚರ್ಚೆ ಸಭೆಯಲ್ಲಿ ನಡೆದಿದೆ.

ಒಂದೆರಡು ವರ್ಷಗಳಿಂದ ಪದೇ ಪದೇ ಈ ಪ್ರಶ್ನೆ ಶಾಸನ ಸಭೆಯ ಮುಂದೆ ಬರುತ್ತಿದೆ. ಆದ್ದರಿಂದ ಅದಕ್ಕೆ ಪ್ರತ್ಯೇಕವಾಗಿ ಉತ್ತರ ಕೊಡಬೇಕಾಗಿಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಈಗ ಟೈಮ್ ಸ್ವಿಚ್ಚಿಗೆ 60 ರೂಪಾಯಿ ಇದ್ದದ್ದು 120 ರೂಪಾಯಿಗಳಾದರೂ ಸಿಕ್ಕುವುದಿಲ್ಲ. ಸರ್ಕಾರದವರೇ ಏಕೆ ಅದನ್ನು ಒದಗಿಸಕೂಡದು?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೂ ಸಿಕ್ಕುವುದಿಲ್ಲ. ಸಿಕ್ಕುವುದಾದರೆ ಕೊಂಡು ಕೊಡುವುದಕ್ಕೆ ಮನಸ್ಸುಮಾಡಬಹುದು.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಟೈಮ್ ಸ್ವಿಚ್ ಖಾಸಗಿ ಜನರಿಗೆ ಸಿಕ್ಕುವುದು ಕಷ್ಟ. ಸಿಕ್ಕಿದರೂ ಬೆಲೆ ಜಾಸ್ತಿ. ಹಿಂದೆ ಇದೇ ವಿಷಯ ಒಮ್ಮೆ ಈ ಸಭೆಯ ಮುಂದೆ ಬಂದಾಗ ನಾನು ಎಲೆಕ್ಟ್ರಿಸಿಟಿ ಬೋರ್ಡಿನೊಡನೆ ಸಮಾಲೋಚನೆಮಾಡಿದಾಗ ಅವರೊಂದು ಆಶ್ವಾಸನ ಕೊಟ್ಟರು. ಬಾಕಿ ಮೀಟರ್ ಹಾಕುವಹಾಗೆ ಬೋರ್ಡಿನವರೇ ಮೀಟರ್ ತಂದು ಹಾಕಿ, ಅದರ ಮೇಲೆ ಬಾಡಿಗೆ ವಸೂಲ್ ಮಾಡುವ ವ್ಯವಸ್ಥೆ ಮಾಡಬಹುದೆಂದು ಹೇಳಿದರು. ಹಾಲಿ ಅವರ ಹತ್ತಿರ 250 ಹಳೆಯ ಮೀಟರುಗಳಿವೆಯೆಂದೂ, ಇನ್ನೂ 250-300 ಒದಗಿಸಿಕೊಳ್ಳಬಹುದೆಂದೂ, ಇವುಗಳನ್ನು ಹಾಕಿದರೆ ರೈತರಿಂದೇನೂ ಬೇರೆ ವಸೂಲು ಮಾಡಬೇಕಾಗಿಲ್ಲವೆಂದೂ ಚೇರ್ಮನ್ನರು ಹೇಳಿದ್ದಾರೆ. ಈ ವಿಷಯ ಏನಾಗಿದೆಯೆಂದು ವಿಚಾರಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಟೈಮ್‌ಸ್ವಿಚ್ ಎಂದಿಟ್ಟು, ಒಬ್ಬ ಹೋಗಿ ಟೈಮಿಗೆ ಸರಿಯಾಗಿ ಕರೆಂಟನ್ನು off ಮಾಡುತ್ತಾನೆ. ಇದನ್ನಾದರೂ ನಿಲ್ಲಿಸುವುದಕ್ಕಾಗುವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಅನುಷ್ಠಾನಕ್ಕೆ ತಂದರೆ ಒಬ್ಬರಿಗೊಬ್ಬರಿಗೆ ಪೈಪೋಟಿ ಬರುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ನಾನು ಹೇಳುವುದನ್ನು ತಾವು ಅರ್ಥಮಾಡಿಕೊಂಡಿಲ್ಲ. ರೈತರು ರಾತ್ರಿಯ ಹೊತ್ತು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಬೇಕೆಂಬುದೇ ವಿದ್ಯುಚ್ಛಕ್ತಿ ಕೊಟ್ಟಿರುವುದರ ಉದ್ದೇಶ. ಯಾರೂ ಸುಮ್ಮನೆ ಕರೆಂಟು ತೆಗೆದುಕೊಂಡು ಹಾಳುಮಾಡುವುದಿಲ್ಲ. ಹೀಗಿದ್ದರೂ, ಒಂದು ಪಂಪಿಗೆ ಮೂರು ರೂಪಾಯಿ ಸ್ವಿಚ್ಚಿಗೆಂದು ವಸೂಲುಮಾಡುತ್ತಾರೆ. ಮೂರು-ನಾಲ್ಕು ಸ್ವಿಚ್ ಇದ್ದರೆ ವೃಥಾ 12 ರೂಪಾಯಿ ಕೊಡಬೇಕಾಗುತ್ತದೆ; ಇದನ್ನು ತಪ್ಪಿಸಿಬಿಡಿ. ಯಾರು ಯಾವಾಗ ಬೇಕಾದಲ್ಲಿ ಉಪಯೋಗಿಸಿಕೊಳ್ಳಲಿ. ಈಗ ಟೈಂಸ್ವಿಚ್ ತರದೆ ಇದ್ದರೆ ಪವರ್ ಕೊಡುವುದಕ್ಕಾಗುವುದಿಲ್ಲ ಎಂದು ಬೇರೆ ಹೇಳುತ್ತಿದ್ದಾರೆ. ಈ restriction ತಪ್ಪಿಸಿ.

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ವಿಚಾರಿಸುತ್ತೇವೆ. ನಾನು ಮೊದಲೇ ಅರಿಕೆಮಾಡಿಕೊಂಡಹಾಗೆ, ಈಗಾಗಲೇ ಕಾರ್ಯಗತವಾಗಲಿರುವ ನೀರಾವರಿ ಯೋಜನೆಗಳು ಪೂರೈಸಿದನಂತರ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಶ್ರೀ ಕೆಂಚಪ್ಪನವರೇನೋ ಬಹಳ ಉದ್ವೇಗದಿಂದ ಮಾತನಾಡಿದ್ದಾರೆ. ಆದರೆ, ಈಹೊತ್ತು ನಮ್ಮ ದೇಶದಲ್ಲಿರುವ ದೊಡ್ಡ ದೊಡ್ಡ ಯೋಜನೆಯ ಪ್ರಾಜೆಕ್ಟುಗಳಲ್ಲಿ ಕೆಲಸ ಮಾಡುತ್ತಿರುವವರು ಯಾರು ಎಂಬುದನ್ನು ನಮ್ಮ ಮಿತ್ರರು ಅರಿಯಬೇಕು. ಆಂಧ್ರ ರಾಜ್ಯದಿಂದ ಬಂದವರು ಮದರಾಸು ರಾಜ್ಯದಿಂದ ಬಂದವರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಮಾಡುತ್ತಿದ್ದಾರೆ. ನಮ್ಮ ಜನ ಏಕೋ ದುರದೃಷ್ಟದಿಂದ ಕೈ ಮೈ ಬಗ್ಗಿ ಶ್ರಮವಹಿಸಿ ಕಾರ್ಯದಲ್ಲಿ ನಿರತರಾಗತಕ್ಕದ್ದರಲ್ಲಿ ಹಿಂದೇಟು ಹೊಡೆಯುತ್ತಾರೆ.

ಶ್ರೀ ಕೆ. ಕೆಂಚಪ್ಪ.—ಅಲ್ಲ, ಸ್ವಾಮಿ, ಹೊಲ ಮಾಡತಕ್ಕ ಮನುಷ್ಯ, ಅದನ್ನು ಬಿಟ್ಟು ತಮ್ಮ ಪ್ರಾಜೆಕ್ಟಿನಲ್ಲಿ ಕೆಲಸಮಾಡುವುದಕ್ಕಾಗುತ್ತದೆಯೇ? ಮಳೆಯಿಲ್ಲದಿರುವುದರಿಂದ, ಹೊಲದಲ್ಲಿ ಬೆಳೆಯಾಗದೆ ಅವನಿಗೆ ಇಂದು ತಿನ್ನಲು ಅನ್ನವಿಲ್ಲ. ಅಂಥವನು ಎಲ್ಲಿಗೆ ಹೋಗುವುದಕ್ಕೆ ಸಾಧ್ಯ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಮಲೆನಾಡಿನಿಂದ ಬಂದವನು. ಇಂದು ಮಲೆನಾಡಿಗೆ ಹೋಗಿ ನೆಲೆಸುವುದಕ್ಕೆ ಸಿದ್ಧವಾಗಿದ್ದರೆ, ಸಾವಿರ ಜನರು ಬೇಕಾದರೂ ಮಲೆನಾಡಿಗೆ ಬರಲಿ, ಅವರಿಗೆ ಏರ್ಪಾಡು ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಹಾಗಿಲ್ಲದೆ, ಅಪ್ಪಹಾಕಿದ ಆಲದಮರವೆಂದು ಹೇಳಿ

ಅಲ್ಲಿಯೇ ಸಾಯಬೇಕೆಂದು ನಮ್ಮ ಜನ ನಿರ್ಧಾರ ಮಾಡಿಕೊಂಡಂತಿದೆ.

ಒಬ್ಬ ಸದಸ್ಯರು.—ಮಲೆನಾಡಿಗೆ ಹೋದರೆ ಅಲ್ಲಿ ಜವಿಾನು-ಥಂಡಿಯಾಗಿ ಕೊಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಉದ್ಯೋಗ ಸಿಕ್ಕುತ್ತದೆ.

ಈ ವರ್ಷ ತುಮಕೂರು ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ, ಚಿತ್ರದುರ್ಗ ಜಿಲ್ಲೆಯ ಎರಡು ತಾಲ್ಲೂಕುಗಳಲ್ಲಿ, ಬಿಜಾಪುರ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಬೆಳಗಾಂ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ, ರಾಯಚೂರು ಜಿಲ್ಲೆಯ ಒಂದು ತಾಲ್ಲೂಕಿನಲ್ಲಿ ಮತ್ತು ಗುಲ್ಬರ್ಗ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಅಭಾವ ಪರಿಸ್ಥಿತಿಯು ಉಂಟಾಗಿದೆ.

ಒಬ್ಬ ಸದಸ್ಯರು.—ಕೋಲಾರ ಜಿಲ್ಲೆಯಲ್ಲಿ ?

ಶ್ರೀ ಕಡಿದಾಳ್ ಮಂಜಪ್ಪ.—ಕೋಲಾರ ಜಿಲ್ಲೆಯಲ್ಲಿ ಆ ಪರಿಸ್ಥಿತಿ ಇಲ್ಲ; ಈ ಸಂದರ್ಭದಲ್ಲಿ ಒಂದು ವಿಚಾರ ಹೇಳಬೇಕು. ಹಳ್ಳಿಗಾಡಿನ ಜನರಿಗೆ ಅಭಾವ ಪರಿಸ್ಥಿತಿಯೆಂದು ಸರ್ಕಾರದವರು ಘೋಷಣೆ ಮಾಡಿದರೆ ಏನೇನು ಅನುಕೂಲವಾಗುತ್ತದೆಂದು ಗೊತ್ತಾಗಿದೆ. ಕೆರೆ ಕಾಮಗಾರಿಗಳು ನಡೆಯುತ್ತವೆಂದು ಅವರು ತಿಳಿದುಕೊಂಡಿದ್ದಾರೆ. ಇದರಿಂದಾಗಿ ಪ್ರತಿಯೊಬ್ಬರೂ ನಮ್ಮ ಕಡೆಯಲ್ಲಿ ಅಭಾವವಿದೆ ಎಂದು ಆಗಾಗ್ಗೆ ಕೂಗು ಹಾಕುತ್ತಾರೆ. ಮಾನ್ಯ ಸದಸ್ಯರು ಅಂಥ ಕೂಗಿಗೆ ಹೆಚ್ಚು ಗಮನ ಕೊಡಕೂಡದೆಂದು ಹೇಳುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯ್ಕನ ಹಳ್ಳಿ).—ತಾವೇ ಬಂದಿದ್ದೀರಿ. ಕಣ್ಣಾರೆ ನೋಡಿದ್ದೀರಿ. ಇನ್ನೂ ನಿಮಗೆ ಅನುಮಾನವೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ನೋಡಿದ್ದರಲ್ಲಿ ತುಮಕೂರಿನಲ್ಲಿ ಸಿರಾ, ಪಾವಗಡ ಮದುಗಿರಿ ತಾಲ್ಲೂಕುಗಳಲ್ಲಿತ್ತು. ತಿಪಟೂರು ತೆಂಗಿನಕಾಯಿನ ತೋಟಗಳಿರುವ ಪ್ರದೇಶ, ಅಲ್ಲಿ ಪ್ರಭಾವ ವಿರುವುದನ್ನೇ ನಾನು ಕಾಣೆ.

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಬೋರ ಬೆಳ್ಳಾವಿ ಪ್ರದೇಶಗಳಲ್ಲಿ ಈ ಹೊತ್ತಿಗೂ ತಿನ್ನುವುದಕ್ಕೆ ಅನ್ನವಿಲ್ಲವೆಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ದೇಶದ ಕೆಲವು ಸ್ಥಳಗಳಲ್ಲಿ ಅವು ಅಭಾವದ ಪ್ರದೇಶವಾಗಿಲ್ಲದಿದ್ದರೂ ಊಟಕ್ಕೆ ಗತಿಯಿಲ್ಲದ ಪರಿಸ್ಥಿತಿ ಇದೆ. ಅಭಾವಕ್ಕೂ ಕ್ಷಾಮಕ್ಕೂ ಬಹಳ ವ್ಯತ್ಯಾಸ ಇದೆ. 'ಕ್ಷಾಮ' ಎಂದರೆ ಬಹಳ ಭೀಕರವಾದದ್ದು. ಅಭಾವ ಪರಿಸ್ಥಿತಿ ಯೆಂಬುದರಲ್ಲಿ ಅಷ್ಟೇನಿಲ್ಲ. ಅಭಾವ ಪರಿಸ್ಥಿತಿಯಲ್ಲಿ ಏನೇನು ಮಾಡಬೇಕೆಂದು ಸರ್ಕಾರದವರು ಆಲೋಚನೆಮಾಡಿ ಈಗಾಗಲೇ ಕಾರ್ಯಕ್ರಮವನ್ನು ಕೈಕೊಂಡಿದ್ದೇವೆ. ನಾನು ಆ ವಿವರಗಳಿಗೆ ಹೋಗುವುದಿಲ್ಲ. ಕೆಲವುಕಡೆ ರಸ್ತೆ ಕಾಮಗಾರಿ ತೆಗೆದುಕೊಂಡಿದ್ದೇವೆ. ಇನ್ನು ಕೆಲವುಕಡೆ ಸಣ್ಣಪುಟ್ಟ ನೀರಾವರಿಯೋಜನೆಗಳನ್ನು ಕಾರ್ಯಗತ ಮಾಡುತ್ತಿದ್ದೇವೆ. ಇದರ ಜೊತೆಗೆ ಕಂದಾಯವನ್ನು ಮಾಫಿ ಮಾಡುವುದು, ಕಂದಾಯ ವಸೂಲುಮಾಡುವುದನ್ನು ತಡೆಗಟ್ಟುವುದು ಮಾಡಲಾಗಿದೆ. ಸಾಕಷ್ಟು ಪ್ರಮಾಣದಲ್ಲಿ ಹಣವನ್ನೂ ಹಂಚಲಾಗಿದೆ. ತುಮಕೂರು ಜಿಲ್ಲೆಗೆ, ಚಿತ್ರದುರ್ಗ ಜಿಲ್ಲೆಗೆ ಹಣವನ್ನು ಹಂಚಲಾಗಿದೆ. ಸ್ಥಳೀಯ ಅಧಿಕಾರಿಗಳು ಇನ್ನೂ ಹಣ ಬೇಕೆಂದು ಅಪೇಕ್ಷೆಪಟ್ಟರೆ ಅದನ್ನು ಕೊಡುವುದಕ್ಕೂ ಸಿದ್ಧವಾಗಿದ್ದೇವೆ.

ಶ್ರೀ ಜಿ. ದುಗ್ಗಪ್ಪ (ಚಿತ್ರದುರ್ಗ).—ಚಿತ್ರದುರ್ಗಕ್ಕೆ ಎಷ್ಟು ಕೊಟ್ಟಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ನೆನಪಿರುವ ಹಾಗೆ 35,000 ರೂಪಾಯಿಗಳನ್ನು ಕೊಟ್ಟಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಪೂರಾ ಚಿತ್ರದುರ್ಗ ಜಿಲ್ಲೆಗೆ 35,000 ರೂಪಾಯಿಗಳೇ ? ಚಿತ್ರದುರ್ಗ ಜಿಲ್ಲೆಯ ಅಭಾವ ಪರಿಸ್ಥಿತಿ ನಿವಾರಣೆಗೆ ತಾವು ಏರ್ಪಡಿಸಿದ್ದ ಸಮಿತಿಯವರು, ಇದನ್ನು ಶಾಶ್ವತವಾಗಿ ನಿವಾರಣೆ ಮಾಡಬೇಕೆಂದು ಹೇಳಿ ಕೆಲವು ಸಲಹೆಗಳನ್ನು ಮಾಡಿದ್ದಾರೆ. ಕೆರೆಗಳನ್ನು ನಿರ್ಮಾಣಮಾಡುವುದೇ ಮುಂತಾಗಿ ಕೆಲವು ಯೋಜನೆಗಳನ್ನು ಸಿದ್ಧಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅವುಗಳನ್ನು ಮಂಜೂರುಮಾಡಿದರೆ ಎಷ್ಟು ಲಕ್ಷ ರೂಪಾಯಿಗಳು ಬೇಕಾಗುತ್ತವೆಂದು ಯೋಚನೆ ಮಾಡಿದ್ದೀರಾ ? ತಾವು ತಾತ್ಕಾಲಿಕವಾಗಿ ಕೊಡುವುದು ಮುಖ್ಯವಾದ ಪ್ರಶ್ನೆಯಲ್ಲ. ಶಾಶ್ವತವಾಗಿ ಅಭಾವಪರಿಸ್ಥಿತಿ ಇಲ್ಲದಿರುವಂತೆ ಮಾಡಲು ಅವರು ಕಳುಹಿಸಿರುವ ಆ ಯೋಜನೆಗಳನ್ನು ತಾವು ಪರಿಶೀಲನೆಮಾಡಿದ್ದೀರಾ ?

3 P.M.

ಶ್ರೀ ಜಿ. ದುಗ್ಗಪ್ಪ.—ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಅಭಾವ ನಿವಾರಣಾ ಸಮಿತಿಯೊಂದಿದೆ. ಸರ್ಕಾರ ಅದನ್ನು ಪರಿಶೀಲಿಸಿದ್ದಾರೆಯೇ ? ಆ ಸಮಿತಿ ಇದೆಯೆಂಬುದನ್ನಾದರೂ ಗಮನಕ್ಕೆ ತೆಗೆದುಕೊಂಡು ಆ ಸಮಿತಿ ಸದಸ್ಯರ ಸಲಹೆಗಳನ್ನು ಮಂಜೂರುಮಾಡಿದ್ದಾರೆಯೇ ? ಆ ರೀತಿ ಮಂಜೂರು ಮಾಡುವುದು ಸೂಕ್ತವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಪದೇ ಪದೇ ಈ ಕೂಗು ಇದ್ದೇ ಇದೆ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಕೇಂದ್ರ ಸರ್ಕಾರದ ನೆರವಿನಿಂದ ಸರ್ಕಾರದವರು ಈ ಸಣ್ಣ ನೀರಾವರೀ ಕಾಮಗಾರಿಗಳ ಯೋಜನೆಯನ್ನು ಕೈಗೊಂಡಿದ್ದಾರೆ. ಈ ಯೋಜನೆಯ ಸಂಬಂಧವಾಗಿ ಮಾನ್ಯ ಸದಸ್ಯರು ಪ್ರಸ್ತಾಪಿಸತಕ್ಕ ನೀರಾವರೀ ಕಾಮಗಾರಿಗಳನ್ನು ಕಾರ್ಯಗತ ಮಾಡುವುದಕ್ಕೆ ಅವಕಾಶವಿದೆ. ಚಿತ್ರದುರ್ಗ ಜಿಲ್ಲೆಯಲ್ಲಿರುವ ಅಭಾವ ಪರಿಹಾರ ಸಮಿತಿಯವರು ಕಳುಹಿಸಿರುವ ವರದಿ ಸರ್ಕಾರಕ್ಕೆ ಇನ್ನೂ ಬಂದಿಲ್ಲ. ಬಹುಶಃ ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಬಂದಿರಬಹುದು ಎಂಬುದಾಗಿ ನಾನು ಭಾವಿಸುತ್ತೇನೆ. ಆ ವಿಚಾರದಲ್ಲಿ ಪರಿಶೀಲನೆಮಾಡುತ್ತೇನೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ತುಮಕೂರು ಜಿಲ್ಲೆಯೊಳಗೆ ಅಭಾವ ಪರಿಸ್ಥಿತಿಯುಂಟಾದರೂ ಹಣ ಖರ್ಚುಮಾಡಲಿಕ್ಕಾಗಲಿಲ್ಲವೆಂದು ತಿಳಿಸಿದ್ದೀರಿ. ಅದರ ಮೇಲೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದರಮೇಲೆ ಅಂತಿಮ ಅಧಿಕಾರ ಸರ್ಕಾರದವರದಾಗಿದೆ. ಆದರೂ ಸ್ಥಳೀಯ ಅಧಿಕಾರಿಗಳ ಅಭಿಪ್ರಾಯಕ್ಕೆ ಸ್ವಲ್ಪಮಟ್ಟಿಗೆ ಮನ್ನಣೆ ಕೊಡುವುದು ಅಗತ್ಯ. ನನ್ನ ಮಿತ್ರರು ಒಬ್ಬರು ತಮ್ಮ ತಾಲ್ಲೂಕಿನಲ್ಲಿ ಅಭಾವ ಇದೆಯೆಂದು ಹೇಳಿದರು. ಆಗ ಕೂಡಲೆ ನಾನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಫೋನ್‌ಮಾಡಿ ಕೇಳಿದೆ. ನಿಜವಾಗಿ ಅಲ್ಲಿ ಅಭಾವ ಇಲ್ಲವೆಂದು ಹೇಳಿದರು. ಅದೊಂದ

(ಶ್ರೀ ಕಡಿದಾಳ್ ಮಂಜಪ್ಪ)

ಬಹಳ ತೊಡಕಿನ ಸಮಸ್ಯೆಯಾಗಿದೆ. ಮಾನ್ಯ ಸದಸ್ಯರು ನಿಜವಾಗಿ ಜನರ ಪ್ರತಿನಿಧಿಗಳು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಮಾತನಾಡುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಐ.ಎ.ಎಸ್. ಆಫೀಸರಿಗೆ ಏನೂ ತಿಳಿಯದು ಎಂಬುನ್ನು ನಾನು ಒಪ್ಪುವುದಕ್ಕಾಗುವುದಿಲ್ಲ.

Sri B. K. PUTTARAMIYA.—I.A.S. Officers at present.

ಶ್ರೀ ಕಡಿದಾಳ್ ಮಂಜಪ್ಪ.—ವ್ಯವಹಾರ ಜ್ಞಾನವಿಲ್ಲದೇ ಇರುವ ಮಾನ್ಯ ಸದಸ್ಯರು ಕೆಲವರು ಇರಬಹುದು. ನಾವೆಲ್ಲರೂ ಬೃಹಸ್ಪತಿಗಳೇ! ಕೊಂಚಮಟ್ಟಿಗೆ ನಮಗೆ ಆ ವ್ಯವಹಾರ ಜ್ಞಾನವಿರುತ್ತದೆ. ಪ್ರಾಕ್ಟಿಕಲ್ಲಾಗಿ ಹಳ್ಳಿಗಳಕಡೆಯ ಜನರ ಕಷ್ಟಸುಖಗಳನ್ನು ತಿಳಿದಿರುವವರು, ಮತ್ತು ಹಳ್ಳಿಗಾಡಿನಲ್ಲಿ ಹುಟ್ಟಿರತಕ್ಕ ಅಧಿಕಾರಿಗಳು ಜನರ ಕಷ್ಟಸುಖಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಸರ್ಕಾರ ನಡೆಸತಕ್ಕವರು ಸ್ಥಳೀಯ ಅಧಿಕಾರಿಗಳ ಮಾತಿಗೆ ಗಮನ ಕೊಡಬೇಕಾಗುತ್ತದೆ.

ಶ್ರೀ ಜಿ. ದುಗ್ಗಪ್ಪ.—ಇನ್ನೊಂದು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಸರ್ಕಾರದಿಂದ ಹಣಬೇಕು ಎಂದು ಹೇಳಿದರೆ ಕೊಡುವುದಿಲ್ಲವೆಂದು ಹೇಳುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ತುಮಕೂರು ಜಿಲ್ಲೆಯಲ್ಲೂ ಎರಡು ವರ್ಷಗಳಿಂದ ಹೀಗೆಯೇ ಆಗುತ್ತಿದೆ. ಅಲ್ಲೊಂದು ರಿಲೀಫ್ ಕಮಿಟಿ ಎಂದು ಪ್ರಾರಂಭ ಮಾಡಿದರು. ಅದಕ್ಕೆ ಎರಡುಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಮಂಜೂರಾಗಿದ್ದರೂ ಅಲ್ಲಿಗೆ ಇನ್ನೂ ದುಡ್ಡು ಕೊಟ್ಟಿಲ್ಲ ಎಂದು ಹೇಳಿದರೆ ಏನು ಮಾಡುವುದು ? ಅಲ್ಲಿರುವವರಿಗೆ ಕೆಲಸಮಾಡುವ ಅನುಭವವೇ ಇಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಆ ಸಮಸ್ಯೆ ನನಗೆ ಗೊತ್ತಿದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಅಲ್ಲಿ ಅಭಾವ ಪರಿಸ್ಥಿತಿ ಕೊನೆಗೊಂಡನಂತರ ಖಾಸಗಿಯಾಗಿ ಆದರೂ ಕೆಲವರು ಅಭಾವ ಪರಿಹಾರಕ್ರಮಗಳನ್ನು ಕೈಗೊಂಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಬಂದ ವರದಿಯ ಪ್ರಕಾರ ಕೆಲವು ಖಾಸಗೀ ವ್ಯಕ್ತಿಗಳು ಅಭಾವ ಪರಿಹಾರಕ್ರಮಗಳನ್ನು ಕೈಗೊಂಡಿದ್ದಾರೆ. ಆದರೆ ಕೆಲವು ಕಾಮಗಾರಿಗಳಿಗೆ ಸರ್ಕಾರ ಹಣಕೊಡುವುದು ತಪ್ಪಾಗುತ್ತದೆಂದು ಸರ್ಕಾರ ತೀರ್ಮಾನಮಾಡಿದ್ದಾರೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ತುಮಕೂರು ಜಿಲ್ಲಾ ಡೆಪ್ಯುಟಿ ಕಮಿಷನರ್ ಅವರು ಒಂದು ಪರಿಹಾರ ನಿಧಿಯನ್ನ ಶೇಖರಿಸಲು ತೀರ್ಮಾನಮಾಡಿದ್ದರೂ ಅಮಲ್ದಾರ್ ಇವತ್ತಿನವರೆಗೂ ದುಡ್ಡು ಕೊಟ್ಟಿಲ್ಲ. ದಯವಿಟ್ಟು ಆರೀತಿ ಹಣಕೊಡಲು ಯೋಚನೆ ಮಾಡಬೇಕು. ಇದು ಕಾಂಗ್ರೆಸ್ ಕ್ಷೇತ್ರ ಇದು ನಾನ್ ಕಾಂಗ್ರೆಸ್ ಕ್ಷೇತ್ರವೆಂದು ಭೇದ ಮಾಡಬಾರದು. ಅದು ಮೀನಿಂಗ್‌ಲೆಸ್.

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಶ್ರೀ ಪುಟ್ಟಣ್ಣನವರ ಫ್ಯಾಮಿನ್ ರಿಲೀಫ್ ವಿಚಾರದಲ್ಲಿ ಕಾಂಗ್ರೆಸ್ ಕ್ಷೇತ್ರ, ನಾನ್ ಕಾಂಗ್ರೆಸ್ ಕ್ಷೇತ್ರ ಎಂದು ಭೇದ ಮಾಡುವುದು ಪರಮ ಅಪರಾಧ.

ಶ್ರೀ ಜಿ. ಎಚ್. ಪುಟ್ಟಣ್ಣ.—ಮಾಡಿದ್ದರೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ತಪ್ಪು ಭಾವನೆ. ಕಾಂಗ್ರೆಸ್ ಕ್ಷೇತ್ರದಲ್ಲಿ ವಾಸಮಾಡತಕ್ಕವರು ಮಾನವರು. ನಾನ್ ಕಾಂಗ್ರೆಸ್ ಕ್ಷೇತ್ರದಲ್ಲಿರುವವರೂ ಸಹ ಮಾನವರೇ. ಮಾನವರಿಗೆ ಏನಾದರೂ ಪ್ರಯೋಜನವಾಗತಕ್ಕಕಾಲದಲ್ಲಿ ಅದರಲ್ಲಿಯೂ ಅಭಾವಕಾಲದಲ್ಲಿ ಅಂತಹ ಭೇದಭಾವ, ದುರ್ಬುದ್ಧಿ ಸರ್ಕಾರದವರಿಗೆ ಬಂದಿಲ್ಲ.

ಕೊನೆಯದಾಗಿ ಪದೇಪದೇ ಸರ್ಕಾರದ ಮುಂದೆ ಅಭಾವ ಪ್ರದೇಶಗಳಲ್ಲಿ ಶಾಸ್ತ್ರೀಯವಾದ ಪರಿಹಾರ ಕ್ರಮ ಕೈಕೊಳ್ಳಬೇಕೆಂದು ಮತ್ತು ಒಂದು ಸಲಹಾ ಸಮಿತಿ ನೇಮಕಮಾಡಬೇಕೆಂಬ ಸಲಹೆ ಬರುತ್ತದೆ. ಆ ಸಲಹೆಯನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆಮಾಡುತ್ತಿದ್ದಾರೆ. ಆ ವಿಚಾರದಲ್ಲಿ ಸರ್ಕಾರದವರು ಆದಷ್ಟು ಜಾಗ್ರತೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಾನು ಇಷ್ಟು ಮಾತನ್ನು ಹೇಳಿದನಂತರ ಮಾನ್ಯ ಸದಸ್ಯರು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದ ನಂಬುತ್ತೇನೆ. ಈ ನಿರ್ಣಯವನ್ನ ಸರ್ಕಾರದವರು ಒಪ್ಪಿಕೊಳ್ಳುವುದಕ್ಕೆ ಕೆಲವಾರು ತೊಂದರೆಗಳಿವೆ. ಈಗಾಗಲೇ ಎಷ್ಟೆಷ್ಟು ಪರಿಹಾರ ಕಾಮಗಾರಿಗಳನ್ನು ಮಾಡಬೇಕೋ ಅಷ್ಟನ್ನೆಲ್ಲಾ ಕೈಗೊಂಡಿದ್ದೇವೆ. ಈ ನಿರ್ಣಯವನ್ನು ಒಪ್ಪಿಕೊಳ್ಳುವುದಕ್ಕೆ ಒಂದು ತೊಂದರೆ ಏನೆಂದರೆ ಮಾನ್ಯ ಸದಸ್ಯರು ಗುಲ್ಬರ್ಗ ಡಿವಿಜನ್ನನ್ನು ಸೇರಿಸಿಲ್ಲ. ಅಲ್ಲಿನ ಪರಿಸ್ಥಿತಿ ನೋಡಿ ಬರಗಾಲದ ಪ್ರದೇಶವೆಂದು ಕರೆಯಬೇಕೋ ಅಥವಾ ಆ ವರ್ಷದಮಟ್ಟಿಗೇ ಆ ರೀತಿಯಾಗಿದೆ ಎಂದು ಹೇಳುವುದೂ ಸರಿಯಲ್ಲ. ನಿರ್ಣಯ ಅಸ್ಪಷ್ಟವಾಗಿರಬಾರದು. ಸ್ಪಷ್ಟವಾಗಿರಬೇಕು. ಮಾನ್ಯ ಸದಸ್ಯರ ನಿರ್ಣಯದಲ್ಲಿ ಅಡಗಿರತಕ್ಕ ಅಭಿಪ್ರಾಯಕ್ಕೆ ಸರ್ಕಾರದ ಮನ್ನಣೆ ಇದೆಯೆಂದು ಮಾತ್ರ ಹೇಳಬಹುದು.

Mr. DEPUTY SPEAKER.—Does the Hon'ble Member Sri Kenchappa withdraw or press the resolution ?

Sri K. KENCHAPPA.—I press it.

Mr. DEPUTY SPEAKER.—The question is :

"This Assembly is of the opinion that the Hiriyur, Challakere, Molakalmuru Taluks of Chitaldrug District, Pavagada, Sira, Madhugiri and Koratagere Taluks of Tumkur District and Northern four taluks of Bijapur District be declared as famine areas in view of the prevailing distress conditions due to failure of timely rainfall."

The motion was negatived.

Sri B. K. PUTTARAMIYA.—I press for a division.

Some HON'BLE MEMBERS OF THE OPPOSITION.—Doors must be closed.

Sri T. MARIAPPA (Minister for Finance)—.If they want a division, the division bell must be rung and then the doors must be closed.

Sri B. K. PUTTARAMIYA.—I want to know which rule applies to that.

(*Some members on the Treasury Benches were observed coming into the Hall*).

Sri J. B. MALLARADHYA.—Votes must be taken of the persons who were present before ringing the bell. They cannot get additional members and have a decision.

Sri T. MARIAPPA.—Please read the rule.

Sri J. B. MALLARADHYA.—I am clear about that.

Sri Kadidal MANJAPPA.—I shall read the relevant rule. Rule 307(3):

> " If the opinion of the Speaker as to the decision of a question is challenged, he may, if he thinks fit, ask the members who are for "Aye" and those for "No" respectively to rise in their places and, on a count being taken, he may declare the determination of the House. In such a case, the names of the voters shall not be recorded."

So accordingly members have to rise in their places and then a count has to be taken.

But Rule 307 (4) states:

> " If the Speaker does not adopt the course provided in sub-rule (3) he shall order a division to be taken in such other manner as he may determine."

Sri J. B. MALLARADHYA.—That is what we have done. We have challenged the decision and we press for a division.

Sri M. RAMAPPA (Harihar).—There is no provision to allow members to get in. The only provision is for you to ask the members who are in favour to say ' Aye ' and those who are against to say ' No ', but instead of doing that the Speaker has allowed a number of members to come in. This is not in conformity with the rules. You have been misguided by the Finance Minister.

